ಜ್ಯೋತಿಕಾರ್ಯದ ವಾರ್ತಾಪತ್ರ



ಮಹರ್ಷಿ ಅಮರ (1919-1982)

**ಋಷಿಗಳು ಹೇಳಿಕೊಟ್ಟಂತೆ ನಾವು ಧ್ಯಾನವನ್ನು ಕಲಿಸುತ್ತೇವೆ.**

### ಬೆಳಕು

ಈ ಎಲ್ಲ ಸೃಷ್ಟಿಯ ಹಿಂದಿರುವ ಮಹಾನ್ ಶಕ್ತಿ. ಬೆಳಕು ಸಾಕ್ಷಾತ್ ದೇವರು.

### ಜ್ಯೋತಿಕಾರ್ಯ

ಎಲ್ಲ ಜೀವಜಾಲಕ್ಕೆ ತನ್ನ ಅರಿವು ಮತ್ತು ಅನುಭವಗಳ ಮಟ್ಟವನ್ನು ಮೇಲೇರಿಸಿ ಉತ್ತಮವಾಗಿ ಬದುಕಲು ನೆರವಾಗುವುದು.

### ಜ್ಯೋತಿಜೀವಿಗಳು

ಇಲ್ಲಿ ಮತ್ತು ಮೇಲಿನ ಲೋಕಗಳಲ್ಲಿ ಜೀವಿಸುತ್ತ, ಜ್ಞಾನ ಮತ್ತು ಚೈತನ್ಯಗಳ ಬೆಳಕನ್ನು ಸಂಗ್ರಹಿಸಿ ಹರಡುತ್ತಿರುವ ಋಷಿಗಳು.

### ಸಪ್ತಋಷಿಗಳು

ಎಲ್ಲ ಜೀವಜಾಲಕ್ಕೆ ಇಲ್ಲಿ ಶಾಂತಿ ಪರಿಪೂರ್ಣತೆಗಳೊಂದಿಗೆ ಜೀವಿಸುವ ದಾರಿ ತೋರಿಸಿ, ಕೊನೆಗೆ ತಮ್ಮ ಮೂಲವಾದ ಬೆಳಕಿಗೆ ಮಾರ್ಗದರ್ಶಿಸಲು ಆಯ್ಕೆಗೊಂಡಿರುವ ಮಹಾತ್ಮರು.

### ಮಹರ್ಷಿ ಅಮರ

ಸಪ್ತಋಷಿಗಳೊಂದಿಗೆ ನೇರಸಂಪರ್ಕವಿದ್ದ, ಹೊಸ ಯುಗದ ಉನ್ನತಬದುಕಿಗೆ ಅಗತ್ಯವಾದ ಜ್ಞಾನ ಮತ್ತು ಸೂಚನೆಗಳನ್ನು ಕೆಳತಂದ ಒಬ್ಬ ಮಹಾನ್ ಗುರುವಾಗಿದ್ದರು.

### ಗುರೂಜಿ ಕೃಷ್ಣಾನಂದ

ಮಹರ್ಷಿ ಅಮರರ ನೇರ ಶಿಷ್ಯರು. ಅವರು ಋಷಿಗಳ ಮಾರ್ಗವಾದ ಧ್ಯಾನಯೋಗವನ್ನು ಬೆಳೆಸಿ, ತಪೋನಗರದಲ್ಲಿ ಸಪ್ತಋಷಿಗಳ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದ್ದಾರೆ.

### ಸಪ್ತಋಷಿ ಧ್ಯಾನಯೋಗ

ಋಷಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ, ಧ್ಯಾನ ಮತ್ತು ನಮ್ಮ ಭಾವನೆ-ಆಲೋಚನೆಗಳನ್ನು ಉತ್ತಮಗೊಳಿಸಿಕೊಳ್ಳುವ ಮೂಲಕ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕುಗಳನ್ನು ಸಮರ್ಪಕವಾಗಿ ಜೀವಿಸಲು ನೆರವಾಗುವ ಒಂದು ವಿನೂತನ ಆಧ್ಯಾತ್ಮಿಕ ಮಾರ್ಗ.

### ಪ್ರಮಾಣಗಳು

- ★ ನಾವೆಲ್ಲರೂ ಒಂದು ಮಹಾ ಜ್ಯೋತಿಯ (ದೇವರ) ಕಣಗಳು.
- ★ ಪ್ರೀತಿ ನಮ್ಮ ಸ್ವಭಾವ.
- ★ ಮೌನ ನಮ್ಮ ಭಾಷೆ.
- ★ ಧ್ಯಾನ ನಮ್ಮ ಮಾರ್ಗ.
- ★ ಈ ಪ್ರಪಂಚ ನಮ್ಮ ಆಶ್ರಮ.
- ★ ಇಡೀ ಸೃಷ್ಟಿಯೇ ನಮ್ಮ ಕುಟುಂಬ.

# ತಪೋವಾಣಿ

ಸಂ. 8 ಸಂ. 1 ಜನವರಿ 2011 ರೂ.15

## ಅನಿಸಿಕೆಗಳು

**ಗುರೂಜಿ ಕೃಷ್ಣಾನಂದ**
**(ಅನು: ಶ್ಯಾಮಲಾದೇವಿ)**

ಒಂದು ಸುಂದರವಾದ ಆಧ್ಯಾತ್ಮಿಕ ಸ್ಥಿತಿಯಲ್ಲಿದ್ದ ವ್ಯಕ್ತಿಯೊಬ್ಬರ ಪತ್ರವನ್ನು ನಾನು ಓದುತ್ತಿದ್ದೆ. ಅಂತಹ ಸ್ಥಿತಿಯಲ್ಲಿರುವ ಜನರು ಅದಕ್ಕಿಂತ ಹೆಚ್ಚು ಏನನ್ನೂ ಅರಸುವುದಿಲ್ಲ, ಮತ್ತು ಎಲ್ಲದರ ಬಗ್ಗೆ ನಿರ್ಲಿಪ್ತ ಮನೋಭಾವ ಹೊಂದಿರುತ್ತಾರೆ; ಸಮಾಧಿ ಸ್ಥಿತಿಯನ್ನು ಅನುಭವಿಸುವುದರ ಬಗ್ಗೆಯೂ ಕೂಡ. ಈ ಸ್ಥಿತಿಗಳನ್ನು ವಿವರಿಸುವುದು ಕಷ್ಟ. ಅಂತಹ ಜನರು ಬೆಳಕಿನಲ್ಲಿ ಬದುಕುತ್ತಾರೆ. ಆ ಸ್ಥಿತಿಯಲ್ಲಿ ಅರಸಲು ಇನ್ನೇನೂ ಇರುವುದಿಲ್ಲ ಮತ್ತು ಎಲ್ಲ ಬಯಕೆಗಳೂ ಈಡೇರಿರುತ್ತವೆ. ನಮ್ಮ ಈ ಒಂದು ಜನ್ಮದ ಸಾಧನೆಯಿಂದ ನಾವು ಅಂಥ ಸ್ಥಿತಿಗಳನ್ನು ತಲುಪಲಾಗುವುದಿಲ್ಲ. ಅದು ಅನೇಕ ಜನ್ಮಗಳ ಸಾಧನೆಯನಂತರ ಮತ್ತು ಋಷಿಗಳೊಂದಿಗಿನ ಒಡನಾಟದಿಂದ ಬರುತ್ತದೆ.

ಈ ಸ್ಥಿತಿಗಳೂ ಕೂಡ ಕೊನೆಗೊಳ್ಳುತ್ತವೆ ಎಂದು ನಾನು ಉತ್ತರಿಸಿದೆ. ಎಲ್ಲವೂ ಕೊನೆಗೊಳ್ಳುತ್ತದೆ.

ಹಗರಣಗಳು, ಲೀಕ್ಸ್ ಮತ್ತು ಇಬ್ಬಗೆಯ ವ್ಯವಹಾರಗಳು ಹೊರಬರುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಮುಂದಾಳತ್ವದ ಕೊರತೆ ಮತ್ತು ಬಡವರ ಬಗ್ಗೆ ಕಳಕಳಿಯ ಕೊರತೆಗಳನ್ನು ನಾವು ನೋಡುತ್ತಿದ್ದೇವೆ. ಇದೊಂದು ನಿರಾಶೆಯ ಸ್ಥಿತಿ. ಇದೂ ಕೂಡ ಕೊನೆಗೊಳ್ಳುತ್ತದೆ.

ನಾನು ವೇದಾಂತ ಹೇಳುತ್ತಿಲ್ಲ. ಉನ್ನತ ದೃಷ್ಟಿಕೋನದಿಂದ ನೋಡುತ್ತಿದ್ದೇನೆ. ಎಲ್ಲವೂ ಕೊನೆಗೊಳ್ಳುತ್ತದೆ. ಮತ್ತು ನಾವು ವಿವಿಧ ಹಂತಗಳಲ್ಲಿ ಸಾಗುತ್ತೇವೆ, ಅನುಭವ ಪಡೆಯುತ್ತೇವೆ ಮತ್ತು ಕಲಿಯುತ್ತೇವೆ.

ಈ ವರ್ಷ, ದುರಾಸೆ, ಕುತಂತ್ರ ಮತ್ತು ಮೌಲ್ಯಗಳತ್ತ ಸಂಪೂರ್ಣ ನಿರ್ಲಕ್ಷ್ಯಗಳಂಥ ಅನೇಕ ಕೃತ್ಯಗಳನ್ನು ಹೊರಹಾಕಿತು. ಇದು ಒಳ್ಳೆಯದೆ ಎಂದು ನಾನು ಹೇಳುತ್ತೇನೆ! ಅಂತಹ ವಿಷಯಗಳು ಪ್ರಕಟಗೊಂಡಾಗಲೇ, ಅವುಗಳನ್ನು ಎದುರಿಸುವುದು, ಅಳಿಸಿಹಾಕುವುದು ಸಾಧ್ಯ. ಇದು ಯಾವುದೇ ಮುಖಂಡರಿಂದ ಸಾಧ್ಯವಾಗುವುದಿಲ್ಲ ಏಕೆಂದರೆ ಅವರು, ಒಂದಲ್ಲ ಒಂದು ರೀತಿಯಲ್ಲಿ, ಈ ಕೃತ್ಯಗಳಲ್ಲಿ ಪಾಲುದಾರರಾಗಿರುತ್ತಾರೆ. ಅದು ಸಾಮಾನ್ಯ, ಅಸಹಾಯಕ ಜನರಾದ ನಮ್ಮಿಂದ ಈ ಮಟ್ಟದಲ್ಲಿ ಸಾಧ್ಯವಿಲ್ಲ.

ಆದರೆ, ನಾವು ಮೌನ ಕ್ರಾಂತಿಯನ್ನು ನಿರ್ಮಿಸಬಲ್ಲೆವು ಎಂಬುದನ್ನು ಅರಿಯೋಣ ಮತ್ತು ಎಚ್ಚರಗೊಳ್ಳೋಣ. ನಾವು ಹೊಸ ಭವಿಷ್ಯಗಳನ್ನು ಸೃಷ್ಟಿಸಬಲ್ಲೆವು. ನಾವು ಧ್ಯಾನ ಮಾಡಿ ಅದರ ಕಂಪನಗಳನ್ನು ಎಲ್ಲ ಕಡೆ ಹರಡಬಲ್ಲೆವು. ನಾವು ಬೆಳಕನ್ನು ಪ್ರಪಂಚದಾದ್ಯಂತ ಹರಡಬಲ್ಲೆವು.

ಬೆಳಕು ಕೆಲಸ ಮಾಡುತ್ತದೆ. ಅದಕ್ಕೆ ಬುದ್ಧಿ ಇದೆ ಮತ್ತು ಶಕ್ತಿ ಇದೆ.

ನಾವು ತಪ್ಪುಗಳನ್ನು ಮಾಡಿ, ಭೂಮಿಯ ಮೇಲಿನ ಜೀವನವನ್ನು, ರಾಜಕೀಯವಾಗಿ, ಆರ್ಥಿಕವಾಗಿ, ನೈಸರ್ಗಿಕವಾಗಿ ಮತ್ತು ಆಧ್ಯಾತ್ಮಿಕವಾಗಿ ಈಗ ನಾವಿರುವ ಸ್ಥಿತಿಗೆ ತಂದಾಗಲೆಲ್ಲ, ಬೆಳಕು ಈ ಮೊದಲು ಕೆಲಸಮಾಡಿದೆ. ಬೆಳಕಿಗೆ ಎಲ್ಲವೂ ಗೊತ್ತಿದೆ. ನಾವು ಬದಲಾವಣೆಗಾಗಿ, ಪರಿವರ್ತನೆಗಾಗಿ, ಅದನ್ನು ಕೇಳುವುದಕ್ಕಾಗಿ ಅದು ಕಾಯುತ್ತಿದೆ. ಪರಿವರ್ತನೆಯನ್ನು ಅರಸಬೇಕು. ಅದನ್ನು ಯಾರೂ ಬಲವಂತವಾಗಿ ವಿಧಿಸುವುದಿಲ್ಲ.

ಆಶಾಭಾವ ಮತ್ತು ಹೊಸ ಪ್ರಾರಂಭಗಳ ಹೊಸ ವರ್ಷವನ್ನು ನಾವು ಪ್ರವೇಶಿಸುತ್ತಿದ್ದೇವೆ. ಹೊಸ ವರ್ಷ ನಮ್ಮನ್ನು ನಿರಾಶೆಗೊಳಿಸುವುದಿಲ್ಲ. ನಾವು ಅತಿ ಹೆಚ್ಚು ಬೆಳಕನ್ನು ಮತ್ತು ಪ್ರೀತಿಯನ್ನು ಇನ್ನು ಕಾಣುತ್ತೇವೆ.

ನಾನು ಪ್ರತಿಯೊಬ್ಬರಿಗೂ ಹೊಸವರ್ಷದ ಶುಭಾಶಯಗಳನ್ನು ಹಾರೈಸುತ್ತೇನೆ. ■

ಮಾನಸ ಫೌಂಡೇಶನ್ (ರಿ)
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560 077. ಭಾರತ.
✆ (080) 2846 5280, 2271 5501, 93420 30250 (ಬೆಳಗ್ಗೆ 10ರಿಂದ ಮಧ್ಯಾಹ್ನ 1)
ಇ-ಮೇಲ್: info@lightagemasters.com ವೆಬ್-ಸೈಟ್: www.lightagemasters.com

## ಧ್ಯಾನದ ತರಗತಿಗಳು

### ತಪೋನಗರದಲ್ಲಿ

**ಭಾನುವಾರ** (ಬೆಳಿಗ್ಗೆ 10 ರಿಂದ 11 ಘಂ.)

### ಬೆಂಗಳೂರು ನಗರದಲ್ಲಿ

**ಭಾನುವಾರ** (ಬೆಳಿಗ್ಗೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಸೋಮವಾರ** (ಸಂಜೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಮಂಗಳವಾರ** (ಸಂಜೆ 7 ರಿಂದ 8 ಘಂ.)
ಶ್ರೀ ಅರಬಿಂದೊ ಕಾಂಪ್ಲೆಕ್ಸ್, 1ನೇ ಫೇಸ್,
ಜೆ.ಪಿ. ನಗರ

**ಬುಧವಾರ** (ಸಂಜೆ 7 ರಿಂದ 8 ಘಂ.)
ಆರ್ಯ ಸಮಾಜ, ಸಿ.ಎಂ.ಹೆಚ್. ರೋಡ್,
ಇಂದಿರಾನಗರ
ಹಿಮಾಂಶು, 4ನೆಯ ಮೇನ್, ಮಲ್ಲೇಶ್ವರಂ
ಮಾರುತಿ ಮಂದಿರ, ವಿಜಯನಗರ

**ಗುರುವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ
ಬನಶಂಕರಿ 2ನೆಯ ಸ್ಟೇಜ್

**ಶುಕ್ರವಾರ** (ಸಂಜೆ 7 ರಿಂದ 8 ಘಂ.)
ಇಂಡಿಯನ್ ಹೆರಿಟೇಜ್ ಅಕಾಡೆಮಿ
6ನೆಯ ಬ್ಲಾಕ್, ಕೋರಮಂಗಲ

**ಶನಿವಾರ** (ಸಂಜೆ 7 ರಿಂದ 8 ಘಂ.)
ಹಿಮಾಂಶು, 4ನೇ ಮುಖ್ಯರಸ್ತೆ,
ಮಲ್ಲೇಶ್ವರಂ

### ಆನೇಕಲ್‌ನಲ್ಲಿ (ರಾಜರಾಜೇಶ್ವರಿ ಬಡಾವಣೆ)

**ಸೋಮವಾರ** (ಸಾಯಂಕಾಲ 6 ರಿಂದ 7 ಘಂ.)
**ಮಂಗಳವಾರ** (ಬೆಳಿಗ್ಗೆ 6 ರಿಂದ 7 ಘಂ.)

ಹೊರಗಿನ ಸಾಧಕರಿಗೆ ಅಂಚೆ ಮತ್ತು ಇ-ಮೇಲ್‌ಗಳ ಮೂಲಕ ಧ್ಯಾನದ ತರಗತಿಗಳು ಲಭ್ಯವಿವೆ. ಹೆಚ್ಚು ಮಾಹಿತಿಗಾಗಿ ಆರನೇ ಪುಟದ ಮೊದಲನೇ ಕಾಲಂ ನೋಡಿ.

**ಡೋರ್‌ವೇಸ್ (ಇಂಗ್ಲಿಷ್)/ತಪೋವಾಣಿ (ಕನ್ನಡ) ಪ್ರಕಾಶ್‌ಮಾರ್ಗ್ (ಮರಾಠಿ) ವಾರ್ತಾಪತ್ರದ ವಾರ್ಷಿಕ ಚಂದಾ ರೂ.200/- ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.**

### ಮಾಸ ಪತ್ರಿಕೆ

ನಿಮ್ಮ ಸ್ನೇಹಿತರಿಗೆ ತಪೋವಾಣಿಯನ್ನು ಉಡುಗೊರೆಯಾಗಿ ಕೊಡಿ. ವಾರ್ಷಿಕ ಚಂದಾ ದೊಂದಿಗೆ ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಕಳುಹಿಸಿ.




**5-12-2010ರಂದು ಬೆಂಗಳೂರಿನ ಮಲ್ಲೇಶ್ವರಂ ಆಟದಮೈದಾನದಲ್ಲಿ ಗುರೂಜಿಯವರು ಬೃಹತ್ ಆಧ್ಯಾತ್ಮಿಕ ಕಾರ್ಯಕ್ರಮದಲ್ಲಿ ಸಭಿಕರನ್ನುದ್ದೇಶಿಸಿ ಮಾತನಾಡುತ್ತಿರುವುದು.**

### ಸುದ್ದಿ-ಸೂಚನೆ

- ಗುರೂಜಿಯವರು 5-12-2010 ರಂದು ಕರ್ನಾಟಕ ಪಿರಮಿಡ್ ಧ್ಯಾನ ಪ್ರಚಾರ ಟ್ರಸ್ಟ್‌ನವರು ಬೆಂಗಳೂರಿನ ಮಲ್ಲೇಶ್ವರಂ ಆಟದ ಮೈದಾನದಲ್ಲಿ ಆಯೋಜಿಸಿದ 'ಧ್ಯಾನ ಬೆಂಗಳೂರು'ಎಂಬ ಬೃಹತ್ ಧ್ಯಾನ ಕಾರ್ಯಕ್ರಮದಲ್ಲಿ ಸೇರಿದ್ದವರನ್ನು ಉದ್ದೇಶಿಸಿ ಮಾತನಾಡಿದರು.
- 21-12-2010 ರಂದು ಗುರೂಜಿಯವರು, ಗುಂಟೂರು ಜಿಲ್ಲೆಯ ಅಮರಾವತಿಯಲ್ಲಿ Pyramid Spiritual Societies Movement ಹಮ್ಮಿಕೊಂಡ 'ಧ್ಯಾನ ಮಹಾ ಚಕ್ರಮ್' ಕಾರ್ಯಕ್ರಮವನ್ನು ಉದ್ಘಾಟಿಸಿದರು.
- 22-12-2010 ರಂದು ಗುರೂಜಿಯವರು, 'ರಾಷ್ಟ್ರೀಯ ಆಧ್ಯಾತ್ಮಿಕ ವಿಜ್ಞಾನಿಗಳ ಒಕ್ಕೂಟ' ಗುಂಟೂರು ಜಿಲ್ಲೆಯ ಅಮರಾವತಿಯಲ್ಲಿ ಆಯೋಜಿಸಿದ 2ನೇ ಆಧ್ಯಾತ್ಮಿಕ ವಿಜ್ಞಾನಿಗಳ ರಾಷ್ಟ್ರೀಯ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದರು.
- 21-12-2010 ರಂದು ತಪೋನಗರದಲ್ಲಿ ಚಂದ್ರಗ್ರಹಣದ ಪ್ರಯುಕ್ತ ವಿಶೇಷ ಧ್ಯಾನವಿತ್ತು.
- 25-12-2010 ರಂದು ಸಾಧಕರೆಲ್ಲ ಕ್ರಿಸ್‌ಮಸ್ ವಿಶೇಷ ಧ್ಯಾನಕ್ಕಾಗಿ ತಪೋನಗರದಲ್ಲಿ ಸೇರಿದ್ದರು.
- 26-12-2010ರಂದು ತಪೋನಗರದಲ್ಲಿ ಅಖಂಡ ಧ್ಯಾನವನ್ನು ಬೆಳಿಗ್ಗೆ 6 ರಿಂದ ಸಂಜೆ 6 ರವರೆಗೆ ಆಯೋಜಿಸಲಾಗಿತ್ತು.

### ಈ ತಿಂಗಳು ತಪೋನಗರದಲ್ಲಿ

| | |
|---|---|
| ಭಾನುವಾರಗಳು: | ಉಪನ್ಯಾಸಗಳು ಬೆಳಿಗ್ಗೆ 11 - 12 ಘಂಟೆ<br>ವಿಶೇಷ ಧ್ಯಾನ ಮತ್ತು ಲೈಟ್ ಚಾನಲಿಂಗ್: ಮಧ್ಯಾಹ್ನ 12-1 ಘಂಟೆ |
| 04-01-11 | ಸೂರ್ಯಗ್ರಹಣ ವಿಶೇಷ ಧ್ಯಾನ ಮಧ್ಯಾಹ್ನ 12.10 - ಸಂಜೆ 4.31 |
| 09-01-11 | ಶಂಬಲಗ್ರೂಪ್ ಮೀಟಿಂಗ್ ಮಧ್ಯಾಹ್ನ 2 ಘಂಟೆಗೆ |
| 16-01-11 | 'ರಾ' ಗ್ರೂಪ್ ಮೀಟಿಂಗ್ ಮಧ್ಯಾಹ್ನ 2 ಘಂಟೆಗೆ |
| 30-01-11 | ಅಖಂಡ ಧ್ಯಾನ: ಬೆಳಿಗ್ಗೆ 10-1 ಘಂಟೆ |

### ಭಾನುವಾರದ ಪ್ರಸಾದವನ್ನು ಪ್ರಾಯೋಜಿಸಿದವರು

| | |
|---|---|
| 07-11-10 | ಅಜಯ್ ಮತ್ತು ಸೀಮಾ ಅಜಯ್ |
| 14-11-10 | ಅಜಯ್ ಪೈ ಮತ್ತು ವಿಜಯ್ ಕುಮಾರ್ |
| 21-11-10 | ಅಶ್ವಿನ್ ರಾಧಾಕೃಷ್ಣನ್, ಲಲಿತಾ ಲಕ್ಷ್ಮಣನ್, ಸುನೀತಾ ಮತ್ತು ಉದಯರಾಜ್ ಸಾನೆ |
| 28-11-10 | ವಿಜಯ್ ಮೆಂಡ್ಯೋಗೆ, ಶ್ವೇತಾ ಮತ್ತು ರವಿ ಜಿ. ಹೆಚ್. |

### ಧ್ಯಾನಕ್ಕೆ ವಿಶೇಷ ದಿನಗಳು

| | | |
|---|---|---|
| 02 | ಭಾನು | ಮಾಸ ಶಿವರಾತ್ರಿ |
| 04 | ಮಂಗಳ | ಅಮಾವಾಸ್ಯೆ, ಸೂರ್ಯಗ್ರಹಣ ಮಧ್ಯಾಹ್ನ 12.10 - ಸಂಜೆ 4.31 |
| 12 | ಬುಧ | ಶುಕ್ಲಾಷ್ಟಮಿ |
| 14 | ಶುಕ್ರ | ಶುಕ್ಲ ದಶಮಿ |
| 15 | ಶನಿ | ಉತ್ತರಾಯಣ ಆರಂಭ |
| 19 | ಬುಧ | ಪೂರ್ಣಿಮಾ |
| 27 | ಗುರು | ಕೃಷ್ಣಾಷ್ಟಮಿ |

**ಈ ತಿಂಗಳ ವಾರ್ತಾಪತ್ರಿಕೆಗಳನ್ನು ಪ್ರಾಯೋಜಿಸಿದವರು ಶ್ರೀಮತಿ ಬಾರ್ಬರಾ ವಾನ್ ಗ್ರೋಟ್**

**8-01-2011ರಂದು ಬೆಳಿಗ್ಗೆ 11ರಿಂದ ಮಧ್ಯಾಹ್ನ 1ರವರೆಗೆ ಗುರೂಜಿಯವರೊಂದಿಗೆ 'ಅನೌಪಚಾರಿಕ ಸಭೆ' ಇರುತ್ತದೆ. ಭಾಗವಹಿಸಲು ಆಸಕ್ತಿ ಇರುವವರು ತಮ್ಮ ಹೆಸರನ್ನು ಆಫೀಸಿನಲ್ಲಿ ರಿಜಿಸ್ಟರ್ ಮಾಡಬೇಕು.**

**ಗುರೂಜಿಯವರ ಭಾನುವಾರದ ಉಪನ್ಯಾಸಗಳ ನೇರ ಪ್ರಸಾರವು ವೆಬ್‌ನಲ್ಲಿ ಮೆಂಬರ್‌ಗಳಿಗೆ ಲಭ್ಯವಿದೆ. ಇದರ ಮಾಹಿತಿಗಾಗಿ ಇಮೇಲ್ ಮುಖಾಂತರ ಸಂಪರ್ಕಿಸ ಬಹುದು.**

ವಾರ್ತಾಪತ್ರದ ಮುದ್ರಣಕ್ಕೆ ರೂ. 5000 ಮತ್ತು ಭಾನುವಾರದ ಪ್ರಸಾದವನ್ನು ಪ್ರಾಯೋಜಿಸುವುದಕ್ಕೆ ರೂ. 2000.

## ಲೈಟ್ ಚಾನಲ್ ವಿಶ್ವಸಂಚಲನದ ಇತ್ತೀಚಿನ ಸುದ್ದಿ

- 27–11–2010 ರಂದು 43 ಜನ ವಾಲಂಟಿಯರ್‌ಗಳು ಶಿವಮೊಗ್ಗ, ಹೊಸೂರು, ಬೆಂಗಳೂರು, ಮುಂಬೈ ಮತ್ತು ಚೆನ್ನೈಗಳ 70 ಶಾಲೆಗಳಲ್ಲಿ ಸುಮಾರು 33,000ಕ್ಕೂ ಹೆಚ್ಚು ಮಕ್ಕಳಿಂದ ಲೈಟ್ ಚಾನಲ್ ಮಾಡಿಸಿದರು. ಈ ಶ್ರೇಷ್ಠ ಕಾರ್ಯವನ್ನು 26/11ರ ಅಪಘಾತಕ್ಕೆ ತುತ್ತಾದವರ ಕುಟುಂಬದವರಿಗೆ ಸಮರ್ಪಿಸಲಾಯಿತು.
- ನವೆಂಬರ್ ತಿಂಗಳ ಕೊನೆಯವರೆಗೆ ದೇಶದಾದ್ಯಂತ 7 ಲಕ್ಷಕ್ಕೂ ಹೆಚ್ಚು ಮಕ್ಕಳು ಲೈಟ್ ಚಾನಲ್ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಾರೆ.
- ನಮಗೆ ಶಿಕ್ಷಣ ಇಲಾಖೆ, ಶಾಲಾ ಆಡಳಿತಾಧಿಕಾರಿಗಳು ಮತ್ತು ಅಧ್ಯಾಪಕ ವೃಂದದವರಿಂದ ದೊರೆತ ಪ್ರೋತ್ಸಾಹ ಮತ್ತು ಸಹಾಯಕ್ಕೆ ನಮ್ಮ ಮನಮಿಡಿಯಿತು. ■

## ಲೈಟ್ ಚಾನಲಿಂಗ್ ಅನುಭವಗಳು

ನಾನು ಲೈಟ್ ಚಾನಲ್ ತಂತ್ರವನ್ನು ಅಭ್ಯಾಸ ಮಾಡುತ್ತಿದ್ದಾಗ, ನನ್ನ ಪಕ್ಕದಲ್ಲಿದ್ದ ಸಹೋದ್ಯೋಗಿ, ಮುಂದಿದ್ದ ವಿದ್ಯಾರ್ಥಿಗಳು ಮತ್ತು ಎಲ್ಲದರ ಸುತ್ತಮುತ್ತಲಿನ ಬಗೆಗಿನ ಅರಿವಿಲ್ಲದಾಯಿತು. ನಾನು ಎಲ್ಲಿರುವೆ ಎಂದು ಮರೆತು ಆ ತಂತ್ರದಲ್ಲಿ ಸಂಪೂರ್ಣವಾಗಿ ಮಗ್ನಳಾಗಿದ್ದೆ.

– ಪ್ರಾಂಶುಪಾಲರು, ಶ್ರೀ ಮಾರುತಿ ಶಾಲೆ, ನೆಲಮಂಗಲ

ನನ್ನ ಕಾಲುಗಳಲ್ಲಿನ ನಿಶ್ಶಕ್ತಿಯಿಂದಾಗಿ ನಡೆಯಲು ಕಷ್ಟವಾಗುತ್ತಿತ್ತು. ಆದರೆ, ಲೈಟ್ ಚಾನಲ್ ಕಾರ್ಯಕ್ರಮದ ನಂತರ ನಡೆಯುವಾಗ ನೋವುಂಟಾಗಲಿಲ್ಲ.

– ಅರುಣ್, ವಿದ್ಯಾರ್ಥಿ, ಸ.ಹಿ.ಪ್ರಾ. ಶಾಲೆ, ಹುಣಸೇಮಾರನಹಳ್ಳಿ, ಬೆಂಗಳೂರು

ನಾನು ಅತ್ಯಂತ ಗೊಂದಲ ಮತ್ತು ನಿರಾಶೆಗೊಂಡಿದ್ದೆ. ನನ್ನ ಆತ್ಮವಿಶ್ವಾಸ ಕಡಿಮೆಯಾಗಿ ನಕಾರಾತ್ಮಕ ಭಾವನೆಗಳಿದ್ದವು. ನಾನು ಬದಲಾಗಲು ಬಯಸಿದರೂ ಅದು ಹೆಚ್ಚಿನ ಫಲ ನೀಡಿರಲಿಲ್ಲ. ನಾನು ಪ್ರತಿದಿನ ಕೆಲವು ನಿಮಿಷಗಳ ಕಾಲ ಲೈಟ್ ಚಾನಲ್ ಮಾಡಲು ಆರಂಭಿಸಿದ ನಂತರ, ಆಶ್ಚರ್ಯಕರ ರೀತಿಯಲ್ಲಿ ಪರಿಸ್ಥಿತಿ ಬದಲಾಗಲಾರಂಭಿಸಿತು. ನಾನು ಶಾಂತಳಾಗಿ, ಆತ್ಮವಿಶ್ವಾಸದಿಂದ ಕೂಡಿ, ದೇವರ ಮೇಲೆ ನಂಬಿಕೆ ಹೆಚ್ಚಾಗಿ ಇತರರನ್ನು ವಿಮರ್ಶಿಸುವುದನ್ನು ನಿಲ್ಲಿಸಿದ್ದೇನೆ. ಜೀವನದ ಬಗ್ಗೆ ನನ್ನ ದೃಷ್ಟಿ ಬದಲಾಗಿದೆ. ನಾನು ಅನಾರೋಗ್ಯರಾಗಿದ್ದ ನನ್ನ ಅಜ್ಜಿಗೆ ಲೈಟ್ ಕಳುಹಿಸಿದಾಗ, ಆಕೆ ಶೀಘ್ರವಾಗಿ ಗುಣಹೊಂದಿದಳು. ನನ್ನ ತಂದೆ ತಾಯಿಯರು ನಾನು ದುಡಿದು ಅವರಿಗೆ ಸಹಾಯ ಮಾಡಬೇಕೆಂದು ಬಯಸಿದವರು ಈಗ ನನ್ನ ವಿದ್ಯಾಭ್ಯಾಸ ಮುಂದುವರೆಸಲು ಪ್ರೋತ್ಸಾಹಿಸುತ್ತಿದ್ದಾರೆ.

– ದೀಪಿಕಾ, ವಿದ್ಯಾರ್ಥಿ, ಪೂನಾ

## ತಪೋನಗರ ಡೈರಿ

**ಸೀಮಾ ಅಲ್‌ಮೇಲ್ ಸೋಮಯಾಜಿ; ಅನು: ಪಾಂಡುರಂಗ**

ನವೆಂಬರ್ ತಿಂಗಳ ಕೊಡುಗೆ ಬೆಳಕಿನ ಹಬ್ಬ, ದೀಪಾವಳಿಯ ಸಂಭ್ರಮದ ಆಚರಣೆ ತಪೋನಗರ ನಿವಾಸಿಗಳ ಮನಸ್ಸಿನಲ್ಲಿ ವರ್ಷವಿಡೀ ಇರುತ್ತದೆ. ಆ ಭಾನುವಾರ ಸಂಜೆ ತಪೋನಗರ ನಿವಾಸಿಗಳೆಲ್ಲ ಸೇರಿ ಸಂಭ್ರಮಿಸುವಂತೆ ನಿರ್ಧರಿಸಲಾಗಿತ್ತು. ಆದರೆ, ಮಳೆಯ ಕಾರಣದಿಂದ ಈ ಕಾರ್ಯಕ್ರಮ ಮುಂದೂಡಲಾಯಿತು. ಕೆಲವು ದಿನಗಳ ನಂತರ, ತಪೋನಗರ ನಿವಾಸಿಗಳೆಲ್ಲ ಉನ್ನತಿ ಬಡಾವಣೆಯಲ್ಲಿ ಸೇರಿ ಪಟಾಕಿ ಹೊಡೆದು ಸಂಭ್ರಮಿಸಿದರು. ಅನಂತರ ಪೂರ್ವಸಿದ್ಧತೆಯಿಲ್ಲದೆ ಗುರೂಜಿಯವರೊಂದಿಗೆ ಅನೌಪಚಾರಿಕ ಮಾತುಕತೆಗಾಗಿ ಶ್ರೀ ಸುಧಾಕರ್‌ರವರ ಮನೆಯಲ್ಲಿ ಎಲ್ಲರೂ ಸೇರಿದ್ದರು. ಅಂದು ಶ್ರೀಮತಿ ಉಮಾ ಸುಧಾಕರ್‌ರವರು ನೀಡಿದ ಉಪಹಾರ ಇಂದಿಗೂ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ.

ಈ ಸಂಭ್ರಮದಲ್ಲಿ ಮಾನಸಿದೇವಿ ಮತ್ತು ಇತರ ದೇವತೆಗಳೂ ಕೂಡಾ ನಮ್ಮೊಂದಿಗಿರುತ್ತಾರೆ ಎಂದು ಹೇಳಿದರೆ ಯಾರೂ ಆಶ್ಚರ್ಯ ಪಡಬೇಕಾಗಿಲ್ಲ. ಎಷ್ಟಾದರೂ ಅವರುಗಳ ವಿಶ್ವವ್ಯಾಪಿ ಅಸ್ತಿತ್ವದ ಒಂದಂಶ ತಪೋನಗರ ನಿವಾಸಿಗಳಲ್ಲಿದೆ.

ತಪೋವನದಲ್ಲಿ ಒಂದು ಮೌನವಿಹಾರ, ಅದರ ಗರ್ಭದಲ್ಲಿ ಹುದುಗಿಸಿಕೊಂಡಿರುವ ಸೌಂದರ್ಯವನ್ನು ನಮಗೆ ಪರಿಚಯಿಸುತ್ತದೆ. ಅದು ನಮ್ಮನ್ನು ನಿರಾಯಾಸವಾಗಿ ಚಿಂತನಾಲಹರಿಗೊಯ್ಯುತ್ತದೆ. ಬೀಸುವ ಗಾಳಿಗೆ ಎಲೆಗಳು ಅಲುಗಾಡುತ್ತವೆ ಮತ್ತು ಅರಳಿದ ಪುಷ್ಪರಾಶಿಗಳು ಓಲಾಡುತ್ತವೆ. ವಿಧವಿಧವಾಗಿ ವಿನ್ಯಾಸಗೊಂಡಿರುವ ಏಳು ಕೊಳಗಳ ಪೈಕಿ ಕೆಲವು ಕೊಳಗಳಲ್ಲಿ ನೇರಳೆ, ಬಿಳಿ ಮತ್ತು ಗುಲಾಬಿ ನೈದಿಲೆಗಳು ಕಂಗೊಳಿಸುತ್ತಿವೆ. ನೀರಿನ ಕೊರತೆ, ಇಲ್ಲಿ ಪ್ರಕೃತಿ ನಳನಳಿಸುವುದರ ಮೇಲೆ ಪ್ರಭಾವ ಬೀರಿಲ್ಲ. ಇಲ್ಲಿರುವ ಅಮರರವರ ಮತ್ತು ಸಪ್ತಋಷಿಗಳ ಗುಹೆಗಳು ಈ ಸ್ಥಳವನ್ನು ದೈವೀತಾಣವಾಗಿಸಿದೆ. ಋಷಿಗಳ ಆಶೀರ್ವಾದ ಬಯಸಿದಂತಿರುವ ಬಳ್ಳಿಗಳು, ಗುಹೆಯನ್ನು ಸಂಪೂರ್ಣವಾಗಿ ಆವರಿಸಿವೆ. ಅವು ಒಳಪ್ರವೇಶಿಸದಂತೆ ಒಪ್ಪಗೊಳಿಸಲಾಗಿದೆ. ತಪೋವನದಲ್ಲಿ ಪ್ರಕೃತಿಮಾತೆ, ನಾವು ಅವಳ ಮಡಿಲಿನಲ್ಲಿ ಕುಳಿತು ಧ್ಯಾನಿಸಲು ಅವಕಾಶ ಕಲ್ಪಿಸಿದ್ದಾಳೆ. ■

## ಲೈಟ್ ಚಾನಲ್ಸ್
### ವಿಶ್ವ ಸಂಚಲನ

ಇದೊಂದು ಆತ್ಮಪ್ರಜ್ಞೆಯಲ್ಲಿ ನಡೆಯುವ ಸಂಚಲನ. ಈ ಪ್ರಪಂಚವನ್ನು ಬೆಳಕು, ಶಾಂತಿ ತುಂಬಿರುವ ಒಂದು ಸುಂದರ ಪ್ರದೇಶವನ್ನಾಗಿ ಮಾಡುವ ಸಂಚಲನ. ಇಲ್ಲಿ ಭಾಷಣಗಳು, ಬಾವುಟಗಳಿಲ್ಲ. ಇಲ್ಲಿ ಬೆಳಕನ್ನು ಮೇಲಿನಿಂದ ತಂದು ಸುತ್ತಲೂ ಹರಡಿದರೆ ಅಷ್ಟೇ ಸಾಕು. ಉಳಿದ ಎಲ್ಲ ಕೆಲಸವನ್ನೂ ಬೆಳಕೇ ಮಾಡುತ್ತದೆ.

ನಾವು ಬೆಳಕನ್ನು ತಂದು ಹರಡಿದಾಗ, ಅದು ಬೇರೆಯವರ ಹೃದಯಗಳು ಮನೆಗಳನ್ನು ತುಂಬಿ, ಅವರ ಭಾವನೆ–ವಿಚಾರಗಳಲ್ಲಿರುವ ಕತ್ತಲನ್ನು ಬೆಳಕನ್ನಾಗಿ ಪರಿವರ್ತಿಸುತ್ತದೆ. ಆಗ ವ್ಯಕ್ತಿಗಳಲ್ಲಿ ಪರಿವರ್ತನೆಯುಂಟಾಗುತ್ತದೆ. ವ್ಯಕ್ತಿಗಳಿಂದ ಪ್ರಪಂಚ ಪರಿವರ್ತಿತವಾಗುತ್ತದೆ. ಪ್ರಪಂಚದಲ್ಲಿ ಬೆಳಕು ತುಂಬುತ್ತದೆ.

ಈ ಬೆಳಕು ಸಾಧಾರಣ ಬೆಳಕಲ್ಲ. ಯಾವ ಬೆಳಕಿನಿಂದ ಇಡೀ ಸೃಷ್ಟಿ ಬಂದಿದೆಯೋ ಆ ಮೂಲ ಬೆಳಕು. ಈ ಬೆಳಕಿನಲ್ಲಿ ಎಲ್ಲಾ ಇದೆ – ಶಕ್ತಿ, ವಿವೇಕ ಮತ್ತು ಭವಿಷ್ಯ. ಈ ಬೆಳಕು ಕಾಣುವುದಿಲ್ಲ. ಆದರೆ ಎಲ್ಲಾ ಕಡೆ ಇದೆ.

**ನಾವು ಪ್ರತಿದಿನ ಏಳುವಾಗ ಮತ್ತು ಮಲಗುವಾಗ 7 ನಿಮಿಷಗಳ ಕಾಲ ಈ ಬೆಳಕನ್ನು ತಂದು ಹರಡೋಣ. ಹರಡಿ ಪ್ರಪಂಚದಲ್ಲಿ ಪರಿವರ್ತನೆಯನ್ನು ತರೋಣ.**

ಈ ಸಂಚಲನವನ್ನು 18–5–2008 ರಂದು, ಗುರೂಜಿ ಕೃಷ್ಣಾನಂದರ ಮೂಲಕ, ಸಪ್ತಋಷಿಗಳು ಪ್ರಾರಂಭಿಸಿದರು.

ಈ ಸಂದೇಶವನ್ನು ಬೇರೆಯವರಿಗೆ ಹರಡಿ. ಈ ಸಂಚಲನವನ್ನು ಬೆಳೆಸಿ. ನಮ್ಮ ವೆಬ್‌ಸೈಟ್ www.lightchannels.comಗೆ ಬನ್ನಿ.

### ಶಂಬಲದ ತತ್ವಗಳು

**ಶಂಬಲದ ಈ ಏಳು ತತ್ವಗಳನ್ನು ಪುರಾತನ ಋಷಿಗಳು ಕೊಟ್ಟಿದ್ದಾರೆ. ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಶಂಬಲದಲ್ಲಿ ವಾಸಿಸುತ್ತಿರುವ ಜನ ಶಾಂತಿ–ಪೂರ್ಣತೆಗಳಿಂದ, ವೃದ್ಧಾಪ್ಯ ಬಾರದೆ ಯಾವಾಗಲೂ ಯೌವ್ವನದಲ್ಲಿಯೇ, ಬದುಕಿದ್ದಾರೆ.**

1. ನಮ್ಮೊಳಗಿರುವ ಬೆಳಕನ್ನು ಅನುಭವಿಸಿ, ಹೊರಗೆ ತಂದು ಹರಡುವುದು.
2. ಪ್ರೀತಿಯನ್ನು ಅನುಭವಿಸಿ ಸುತ್ತಲೂ ಹರಡುವುದು.
3. ಎಲ್ಲರಲ್ಲಿಯೂ ಮತ್ತು ಎಲ್ಲದರಲ್ಲಿಯೂ ಇರುವ ಚೈತನ್ಯವನ್ನು ಅನುಭವಿಸುವುದು.
4. ದಿನ ನಿತ್ಯದ ಚಟುವಟಿಕೆಗಳನ್ನು ಮೊದಲು ಮನಸ್ಸಿನಲ್ಲಿ ನೆನೆದು, ಅನಂತರ ಪಿಸುಮಾತಿನಲ್ಲಿ ಹೇಳಿ ಅನಂತರ ಕಾರ್ಯಗತ ಮಾಡುವುದು.
5. ಯಾವುದೇ ಗುರಿಯನ್ನು ಸಾಧಿಸುವ ಮೊದಲು, ಅದರ ಬಗ್ಗೆ ಹೆಚ್ಚು ಮಾತನಾಡದೆ ಗುಟ್ಟಾಗಿಡುವುದು.
6. ಧ್ಯಾನದಿಂದ ದೇಹ, ಮನಸ್ಸು ಮತ್ತು ಬುದ್ಧಿಗಳ ಶಕ್ತಿಗಳನ್ನು ಒಟ್ಟುಮಾಡಿ ಅರಿಷಡ್‌ವರ್ಗವನ್ನು ಗೆಲ್ಲುವುದು.
7. ನಮಗೆ ಬೇಕಾದ ಲೌಕಿಕ ಅಗತ್ಯಗಳ ಬಗ್ಗೆ ನಾವೇ ನಮ್ಮ ತೃಪ್ತಿಯ ರೇಖೆಗಳನ್ನು ಹಾಕಿಕೊಂಡು, ಆಧ್ಯಾತ್ಮಿಕ ಸಾಧನೆಯ ಬಗ್ಗೆ ಗಮನಕೊಡಬೇಕು.

# ಗುರೂಜಿಯವರ ನುಡಿಗಳು

(ಗುರೂಜಿಯವರ ಭಾನುವಾರದ ಉಪನ್ಯಾಸಗಳ ಸಂಗ್ರಹ)

(ಸಂಗ್ರಹ: ಶೋಭಾ ಕೆ. ರಾವ್; ಅನುವಾದ: ಶಿವಪ್ರಕಾಶ್ ಎಲ್)

07–11–2010

ಆಳಂದಿಯಲ್ಲಿ 700 ವರ್ಷಗಳಿಂದ ತಪಸ್ಸು ಮಾಡುತ್ತಿರುವ ಸಂತ ಜ್ಞಾನೇಶ್ವರರ ಸಮಾಧಿಯಿದೆ. ನಾನು ಸೂಕ್ಷ್ಮ ಪ್ರಯಾಣದ ಮೂಲಕ ಅಲ್ಲಿಗೆ ಹೋಗಲು ಪ್ರಯತ್ನಿಸಿದಾಗ, ಒಬ್ಬ ವ್ಯಕ್ತಿ ಆ ಸ್ಥಳದಲ್ಲಿ ಕಾವಲು ಕಾಯುತ್ತ ರಕ್ಷಿಸುತ್ತಿದ್ದುದು ನನಗೆ ಕಂಡು ಬಂದಿತು. ಆ ವ್ಯಕ್ತಿ ನನ್ನನ್ನು "ನೀವೇಕೆ ಅಲ್ಲಿಗೆ ಹೋಗುವಿರಿ? ನೀವು ಅವರ ತಪಸ್ಸಿಗೆ ಭಂಗ ತರುವಿರಿ" ಎಂದರು. ಅವರು ಹೇಳಿದ್ದು ಅತ್ಯಂತ ಸೂಕ್ತವಾಗಿತ್ತು. ನಾವಿನ್ನೂ ತಿಳಿಯಬೇಕಾದ ಇಂತಹ ಅನೇಕ ವಿಷಯಗಳು ಈ ಪ್ರಪಂಚದಲ್ಲಿ ಇವೆ.

ನಾನು ಆಗಾಗ್ಗೆ ಬರುವ ಒಂದೇ ರೀತಿಯ ಪ್ರಶ್ನೆಗಳಿಗೆ ಅತ್ಯಂತ ಸಹನೆಯಿಂದ ಉತ್ತರಿಸುತ್ತೇನೆಂದು ಒಬ್ಬ ವ್ಯಕ್ತಿ ಮೆಚ್ಚುಗೆ ಸೂಚಿಸಿದರು. ನಾನು ಅದನ್ನು ನನ್ನ ಗುರುಗಳಿಂದ ಕಲಿತಿದ್ದೇನೆ. ಆದ್ದರಿಂದ ನೀವು ಕೇಳಿದ ಪ್ರಶ್ನೆಗಳನ್ನು ಮತ್ತೆ ಕೇಳಲು ಹಿಂಜರಿಯಬೇಡಿ. ಏಕೆಂದರೆ ಆ ವಿಷಯಗಳಲ್ಲಿ ಹೆಚ್ಚಿನ ವಿಷಯ ಹೇಳಲು ಪ್ರಯತ್ನಿಸುತ್ತೇನೆ.

ಒಬ್ಬ ವ್ಯಕ್ತಿ ತಮ್ಮ ಗೊಂದಲಕ್ಕೆ ಕಾರಣವನ್ನು ಕೊಡದೆ ಸಹಾಯವನ್ನು ಕೋರಿದರು. ಧ್ಯಾನಿಯಾದವರು, ಅದರಲ್ಲಿಯೂ ಋಷಿಗಳ ಮಾರ್ಗದಲ್ಲಿರುವವರು ಗೊಂದಲಕ್ಕೊಳಗಾಗುವುದಿಲ್ಲ. ಕುಂದು ಕೊರತೆಗಳು, ಹಿಂಜರಿಕೆ ಮತ್ತು ಕೆಲವು ಸೂಚನೆಗಳನ್ನು ಅನುಸರಿಸಲು ಆಗದಿರುವುದು ಇದೆಲ್ಲಾ ಸಹಜ. ನಮ್ಮ ದೈನಂದಿನ ಜೀವನದಲ್ಲಿ ಮತ್ತು ಆಧ್ಯಾತ್ಮಿಕ ಪ್ರಯಾಣದಲ್ಲಿ ಏನು ಮಾಡಬೇಕು ಎಂಬುದರ ಬಗ್ಗೆ ನಮ್ಮ ಗುರಿಗಳನ್ನು ಸ್ಪಷ್ಟವಾಗಿ ಅರಿತಿರಬೇಕು. ನಮಗೆ ಅರ್ಥವಾಗದೇ ಇದ್ದಾಗ ಅಥವಾ ಅರ್ಥ ಮಾಡಿಕೊಳ್ಳಲು ಇಷ್ಟಪಡದೇ ಇದ್ದಾಗ ಗೊಂದಲ ಉಂಟಾಗುವುದು.

ನಮ್ಮ ಸಮಾಜದಲ್ಲಿ ಮಹಿಳೆಯರನ್ನು ಅಮಾನವೀಯವಾಗಿ ನಡೆಸಿಕೊಳ್ಳುವುದರ ಬಗ್ಗೆ ಸುಪ್ರೀಂ ಕೋರ್ಟ್, 'ನಮ್ಮ ಸಮಾಜ ರೋಗಪೀಡಿತವಾದುದು' ಎಂದು ಉಲ್ಲೇಖ ಮಾಡಿತ್ತು. ಸಮಾಜ ಮಾತ್ರವಲ್ಲ, ಎಲ್ಲಾ ಕಡೆ ಎಲ್ಲ ವಿಧಗಳಲ್ಲಿ ರೋಗಗ್ರಸ್ತವಾಗಿದೆ. ಈ ರೋಗಗಳು ಪ್ರತಿ ವ್ಯಕ್ತಿಯಲ್ಲಿವೆ. ಕೆಲವು ನಿರ್ದಿಷ್ಟ ವಿಷಯಗಳಿಗೆ ತಕ್ಷಣದ ಪರಿಹಾರಗಳಿಲ್ಲ. ಇವೆಲ್ಲಾ ವಾಸ್ತವಾಂಶಗಳು. ನಾವು ಧ್ಯಾನ ಮಾಡಬಹುದು, ಬೆಳಕನ್ನು ಚಾನಲ್ ಮಾಡಬಹುದು ಮತ್ತು ಬೆಳಕನ್ನು ಹರಡಬಹುದು. ಬಹುಶಃ ಇವು ಮಾತ್ರ ಬದಲಾವಣೆಗಳನ್ನು ತರುತ್ತವೆ.

ಒಬ್ಬ ವ್ಯಕ್ತಿ ನನಗೆ ಪತ್ರ ಬರೆಯುತ್ತಾ, "ತಪೋವನದ ಒಂದು ಚಕ್ರ ಮಂಟಪದಲ್ಲಿ ಒಬ್ಬ ವಿದ್ಯಾವಂತ ವ್ಯಕ್ತಿ ಆಹಾರವನ್ನು ಸೇವಿಸುತ್ತಿದ್ದುದನ್ನು ನೋಡಿ ನನಗೆ ಬಹಳ ದುಃಖವಾಯಿತು. ಕೆಲವರು ಅಲ್ಲಿ ಮಲಗಿ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದರು" ಎಂದು ತಿಳಿಸಿದರು. ಹಳ್ಳಿಗರು ಒಂದು ರೀತಿ ಭಯ ಭಕ್ತಿಯಿಂದ ಈ ಸ್ಥಳಗಳನ್ನು ಹಾಗೆ ಬಳಸಿಕೊಳ್ಳುತ್ತಿಲ್ಲ. ಬಹುಶಃ ವಿದ್ಯಾವಂತ ಧ್ಯಾನಿಗಳು, ಜಾಗೃತಗೊಂಡಿರುವ ಜನರು ಇಂಥ ಕೆಲಸಗಳನ್ನು ಮಾಡುತ್ತಾರೆ. ಇದು ದುಃಖಕರ ಸಂಗತಿ.

ಈ ಮಾರ್ಗದಲ್ಲಿ ಬೆಳೆಯಲು ಅದ್ಭುತವಾದ ಮತ್ತು ಕೊನೆಯಿಲ್ಲದ ಅವಕಾಶಗಳಿವೆ. ನಾವು ಜನರಿಗೆ ವೈಯಕ್ತಿಕವಾಗಿ ಮಾರ್ಗದರ್ಶಿಸುತ್ತೇವೆ; ನಾವು ಅವರ ಸಮಸ್ಯೆಗಳನ್ನು ಅರ್ಥ ಮಾಡಿಕೊಂಡು, ತಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಮತ್ತು ತಮ್ಮ ಕುಂದು ಕೊರತೆಗಳಿಂದ ಹೊರಬರಲು ಸಹಾಯ ಮಾಡಲು ಪ್ರಯತ್ನಿಸುತ್ತೇವೆ. ನಿಮ್ಮ ಆಧ್ಯಾತ್ಮಿಕ ಬೆಳವಣಿಗೆಯಲ್ಲಿ ನಮಗೆ ಪ್ರಾಮಾಣಿಕ ಕಾಳಜಿ ಇದೆ. ನೀವು ಇಲ್ಲಿರುವ ಸ್ವಾತಂತ್ರ್ಯವನ್ನು ಮತ್ತು ಅವಕಾಶವನ್ನು ಸಹ ಬಳಸಿಕೊಳ್ಳಬೇಕು. ಹೆಚ್ಚು ತಿಳಿದುಕೊಳ್ಳಬೇಕು ಮತ್ತು ಹೆಚ್ಚು ಬೆಳೆಯಬೇಕು.

ಒಬ್ಬ ವ್ಯಕ್ತಿ ನನ್ನನ್ನು ಕೇಳಿದರು, "ನಾವು ಋಷಿಗಳನ್ನು ಏಕೆ ಸಂಪರ್ಕಿಸಬೇಕು?" ನಾವು 'ಸಂಪರ್ಕ' ಅಭ್ಯಾಸ ಮಾಡುತ್ತಿರುವುದು, ಒಂದಲ್ಲ ಒಂದು ದಿನ ನಾವು ಸ್ವತಂತ್ರವಾದ ಮತ್ತು ಶಕ್ತಿಯುತವಾದ ಸಂಪರ್ಕ ಪಡೆಯುವುದಕ್ಕೋಸ್ಕರ. ಆದ್ದರಿಂದ ನಾವು ತಾಳ್ಮೆಯಿಂದ ನಿರಂತರವಾಗಿ ಅಭ್ಯಾಸ ಮಾಡಬೇಕು.

ಆಧ್ಯಾತ್ಮಿಕ ಜೀವನ ಕೈಗೊಂಡ ಮೇಲೆ ನಾವು ಎಲ್ಲಾ ಸಮಯದಲ್ಲಿ ಜಾಗೃತರಾಗಿರಬೇಕು. ಏಕೆಂದರೆ ಒಬ್ಬ ಋಷಿ ಅಥವಾ ದೈವ ನಮ್ಮೊಡನೆ ಯಾವಾಗ ಸಂಪರ್ಕಿಸುತ್ತಾರೆ ಎಂಬುದನ್ನು ಹೇಳುವಂತಿಲ್ಲ.

14–11–2010

ನನ್ನ ಮಾತುಗಳ ಹಿಂದೆ ಚೈತನ್ಯಗಳಿವೆ ಎಂಬುದನ್ನು ಯಾವಾಗಲೂ ನೆನಪಿನಲ್ಲಿಟ್ಟುಕೊಳ್ಳಿ. ನಮ್ಮೊಡನೆ ಅಗೋಚರ ಋಷಿಗಳಿದ್ದಾರೆ, ಅವರು ನಮ್ಮ ಜೀವನದ ಒಂದು ಭಾಗ ಎಂಬುದನ್ನು ಮರೆಯಬೇಡಿ.

ನಾವು ಎಲ್ಲ ಪ್ರತಿಕೂಲ ಪರಿಸ್ಥಿತಿಗಳನ್ನು ಎದುರಿಸುತ್ತಿರುವಾಗಲೂ ಭರವಸೆ ಹೊಂದಿರಬೇಕು. ಮುಂದೆ ಯಾವುದಾದರೂ ಒಂದು ದಿನ, ಆಂಗ್ ಸಾನ್ ಸೂ ಚಿ ಅವರ ಬಿಡುಗಡೆಯಂತಹ ವಿಷಯಗಳು ಸಂಭವಿಸಬಹುದು. ಆಕೆಯ ಹಾಗೆ ಕೆಲವರು ಪ್ರಪಂಚ ಪ್ರಳಯವನ್ನು ದಾಟಲು ಸಹಾಯ ಮಾಡುತ್ತಾರೆ.

ನೀವು ಬೆಳಕನ್ನು ಕೊಂಡೊಯ್ಯುವಾಗ ಅದರ ಚೈತನ್ಯಗಳನ್ನು ಕೂಡಾ ಒಯ್ಯುವಿರಿ. ಅವು ನಿಮ್ಮೊಡನೆ ಸಂಪರ್ಕಕ್ಕೆ ಬರುವ ಜನರಲ್ಲಿ ಅನೇಕ ಪ್ರಕ್ರಿಯೆಗಳನ್ನು ಸಕ್ರಿಯಗೊಳಿಸುತ್ತವೆ ಮತ್ತು ತೀವ್ರಗೊಳಿಸುತ್ತವೆ. ಇದ್ದಕ್ಕಿದ್ದಂತೆ ಅವರಲ್ಲಿ ಒಂದು ರೀತಿಯ ಆತ್ಮವಿಮರ್ಶೆ ಪ್ರಾರಂಭವಾಗುತ್ತದೆ. ಅವರಲ್ಲಿ ಜೀವನದ ಬಗ್ಗೆ, ಬದುಕಲು, ಸತ್ಯದ ಬಗ್ಗೆ ಹೆಚ್ಚು ತಿಳಿಯಲು ಕುತೂಹಲ ಉಂಟಾಗುತ್ತದೆ. ಜನರು ಬೆಳಕನ್ನು ಚಾನಲ್ ಮಾಡದಿದ್ದರೂ, ಬೆಳಕನ್ನು ಹೊಂದಿದ್ದರೆ ಅಷ್ಟೇ ಸಾಕು.

ನೀವು ಒಂದು ಮಾರ್ಗವನ್ನು ಮತ್ತು ಒಬ್ಬ ಗುರುವನ್ನು ಆಯ್ಕೆ ಮಾಡಿಕೊಂಡರೆ ಮತ್ತು ಆ ಗುರು ನಿಮಗೆ ಸರಿಯಾದವರು ಎಂದು ಅನಿಸಿದರೆ, ಕಣ್ಣುಮುಚ್ಚಿ ಅನುಸರಿಸಿ. ಬುದ್ಧಿಶಕ್ತಿ ಸಹಾಯದಿಂದ ಅರ್ಥ ಮಾಡಿಕೊಳ್ಳಲು ಸ್ವಲ್ಪ ಮಟ್ಟಿಗೆ ಪ್ರಯತ್ನಿಸಿ ಮತ್ತು ಅಲ್ಲಿಂದಾಚೆಗೆ ಹೋಗಿ ಬೆಳಕನ್ನು ಅನುಭವಿಸಿ. ವಿಶ್ಲೇಷಿಸಬೇಡಿ. ಬುದ್ಧಿಯ ಉಪಯೋಗ ಮಾಡಿಕೊಳ್ಳಿ. ಬುದ್ಧಿಯ ಗಡಿಗಳನ್ನು ದಾಟಿ ಮುಂದೆ ಹೋಗಲು ಮತ್ತು ಚಿಂತಿಸಲು ಪ್ರಯತ್ನಿಸಿ.

ಸಂಬಂಧ ಕೂಡಾ ಒಂದು ಜವಾಬ್ದಾರಿ. ಇಲ್ಲಿರುವ ಮತ್ತು ಇಲ್ಲದೇ ಇರುವ ನನ್ನ ಪ್ರತಿಯೊಬ್ಬ ವಿದ್ಯಾರ್ಥಿಯೂ ಆಧ್ಯಾತ್ಮಿಕ ರೀತಿಯಲ್ಲಿ ನನ್ನೊಂದಿಗೆ ಸಂಬಂಧಹೊಂದಿದ್ದಾರೆ. ಒಂದು ಸಂಬಂಧದ ಜವಾಬ್ದಾರಿಗಳ ಬಗ್ಗೆ ತಿಳಿದಿರುವ ಕಾನೂನುಗಳಿಲ್ಲ. ನೀವು ಬೆಳೆಯಲು ಮತ್ತು ಮುಂದೆ ಸಾಗಲು ಸಹಾಯ ಮಾಡುವುದು ನನ್ನ ಜವಾಬ್ದಾರಿ. ನಿರ್ಣಾಯಕ ಹಂತಗಳಲ್ಲಿ ನಾನು ಮತ್ತು ಋಷಿಗಳು ಒದಗಿಸಿದ ಜ್ಞಾನ, ಚೈತನ್ಯಗಳು, ತಂತ್ರಗಳು ಮತ್ತು ಮಾರ್ಗದರ್ಶನಗಳ ಪ್ರಯತ್ನಗಳನ್ನು ಮೆಚ್ಚುವುದರ ಬಗ್ಗೆ ನಿಮ್ಮದೇ ಆದ ಜವಾಬ್ದಾರಿಗಳನ್ನು ಹೊಂದಿರುತ್ತೀರಿ.

ಜನರು ಇಲ್ಲಿ ಅತ್ಯಂತ ಪ್ರೀತಿಯಿಂದ ಪರಸ್ಪರ ಸ್ಪಂದಿಸುತ್ತಾರೆ ಎಂಬುದು ಮಹಿಳೆಯೊಬ್ಬರ ವೀಕ್ಷಣೆ. ಅವರಲ್ಲಿ ಬೆಳಕನ್ನು ಕಂಡೆನೆಂದು ಆಕೆ ಹೇಳುತ್ತಾರೆ.

ಒಬ್ಬ ವ್ಯಕ್ತಿ, 'ನಾನು ಯಾವಾಗಲೂ ನನ್ನ ಸಮಸ್ಯೆಗಳ ಬಗ್ಗೆ ಬರೆದು ನಿಮಗೆ ತೊಂದರೆ ಕೊಡುತ್ತೇನೆ. ಆದರೆ ಈಗ ನಾನು ಸಂತೋಷವಾಗಿದ್ದೇನೆ ಎಂದು ಹೇಳಬಯಸುತ್ತೇನೆ.' ಎಂದು ಬರೆದರು. ಈ ಮಾತುಗಳು ನನಗೆ ಕಲಶಪ್ರಾಯವಾಗಿವೆ.

2011ರ ಮಧ್ಯದ ವೇಳೆಗೆ ನಮ್ಮ ಎಲ್ಲ ಪ್ರಮುಖ ಕರ್ಮಗಳನ್ನು ಕಳೆದು ಹಾಕಬೇಕಾಗಿದೆ. ಇದಕ್ಕೆ ನಮ್ಮ ನಮ್ಮ ಕ್ರಮಬದ್ಧ ಧ್ಯಾನಗಳು ಸಾಕು. ಮುಂದೆ ಋಷಿಗಳು 2012ನೇ ವರ್ಷಕ್ಕೆ ನಮ್ಮನ್ನು ಸಿದ್ಧಪಡಿಸುತ್ತಾರೆ. ನೀವು ಕ್ರಮಬದ್ಧವಾಗಿ ಧ್ಯಾನ ಮಾಡದೇ ಹೋದರೂ, ಯಾವಾಗಲೂ ಬೆಳಕನ್ನು ಹೊಂದಿರಿ.

## ಗುರೂಜಿಯವರ ನುಡಿಗಳು

**(ಗುರೂಜಿಯವರ ಭಾನುವಾರದ ಉಪನ್ಯಾಸಗಳ ಸಂಗ್ರಹ)**

**(ಸಂಗ್ರಹ: ಶೋಭಾ ಕೆ. ರಾವ್; ಅನುವಾದ: ಶಿವಪ್ರಕಾಶ್ ಎಲ್)**

ಸಾಧಕರಲ್ಲದವರೊಬ್ಬರು ಆದರೆ ನನ್ನಲ್ಲಿ ಬಹಳ ಪ್ರೀತಿ ವಿಶ್ವಾಸ ಉಳ್ಳವರು ಬೆನ್ನುಮೂಳೆಯ ಶಸ್ತ್ರಚಿಕಿತ್ಸೆ ಪಡೆದರು. ಆಗ ನನಗೂ ಆ ಭಾಗದಲ್ಲಿ ನೋವು ಕಾಣಿಸಿಕೊಂಡಿತು. ಪ್ರೀತಿ ಮತ್ತು ಬಾಂಧವ್ಯ ಇರುವಲ್ಲಿ ನೋವನ್ನು ಕೂಡಾ ಹಂಚಿಕೊಳ್ಳುವುದು ಸಹಜ. ಜೀವನದಲ್ಲಿ ಇಂಥ ಸೌಂದರ್ಯವಿದೆ.

ಸಾಧಕರಲ್ಲದ ಇನ್ನೊಬ್ಬರು ನಮ್ಮ ಪುಸ್ತಕಗಳನ್ನು ತೆಲುಗಿಗೆ ಭಾಷಾಂತರ ಮಾಡಿದರು. ಅಲ್ಲದೆ ಪುಸ್ತಕಗಳನ್ನು ಮುದ್ರಿಸಲು ಧನ ಸಹಾಯ ಮಾಡಿದರು. ಅವರು "ನಾನು ನಿಮ್ಮ ಮೇಲಿನ ಪ್ರೀತಿಗಾಗಿ ಇದನ್ನು ಮಾಡಿದೆ." ಎಂದರು. ಇದು ಹೃದಯಸ್ಪರ್ಶಿಯಾಗಿತ್ತು. ನಮ್ಮ ಪ್ರೀತಿಯನ್ನು ವ್ಯಕ್ತಪಡಿಸುವ ರೀತಿಗಳಲ್ಲಿ ಇದೂ ಒಂದು.

**21–11–2010**

ನಾವು ಮಾತು ಪ್ರಾರಂಭಿಸುವ ಮೊದಲು ಬೆಳಕನ್ನು ಅನುಭವಿಸಿದರೆ, ನಾವು ಎಲ್ಲವನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಇಲ್ಲಿ ವಿವರಿಸುವ ಮತ್ತು ವಿವರಿಸದೇ ಇರುವ ವಿಷಯಗಳನ್ನು ಗ್ರಹಿಸಲು ನಮಗೆ ಸಾಧ್ಯವಾಗುತ್ತದೆ.

ಜನರು ತಮ್ಮ ಬದುಕಿನಲ್ಲಿ ಬೆಳಕನ್ನು ತೆಗೆದುಕೊಂಡಿರುವುದನ್ನು ನೋಡಲು ನನಗೆ ಅತ್ಯಂತ ಸಂತೋಷವಾಗುತ್ತದೆ. ಅದಕ್ಕೆ ಬಲವಾದ ಉದ್ದೇಶ, ಆಳವಾದ ವಿಶ್ವಾಸ ಮತ್ತು ಪ್ರೀತಿ ಅತ್ಯಂತ ಮುಖ್ಯ.

ಒಬ್ಬ ವ್ಯಕ್ತಿ ಹೀಲಿಂಗ್ ಚೈತನ್ಯಗಳನ್ನು ಪಡೆದು, ಚೆನ್ನಾಗಿ ನಿದ್ರಿಸಿದರು. ಬೆಳಕು ಇಡೀ ವ್ಯವಸ್ಥೆಯನ್ನು ವಿಶ್ರಾಂತಿಗೊಳಿಸುತ್ತದೆ, ನಂತರ ಹೀಲಿಂಗ್ ಪ್ರಕ್ರಿಯೆ ಪ್ರಾರಂಭವಾಗುತ್ತದೆ. ಆದ್ದರಿಂದಲೇ ನಾವು ರಾತ್ರಿ 10 ಗಂಟೆಗೆ ಹೀಲಿಂಗ್ ಅನ್ನು ಮಾಡುತ್ತೇವೆ.

ಒಬ್ಬ ವ್ಯಕ್ತಿ "ನನಗೆ ಬೆಳಕು ಸಂಗಾತಿಯಾಗಿಬಿಟ್ಟಿದೆ. ನಾನು ಎಲ್ಲದಕ್ಕೂ ಬೆಳಕಿನ ಜೊತೆ ಸಮಾಲೋಚಿಸುತ್ತೇನೆ. ನಾನು ಅತ್ಯಂತ ಸಣ್ಣ ವಿಷಯಗಳನ್ನು ಬೆಳಕಿಗೆ ಕೇಳಬಹುದೇ?" ಎಂದು ಪತ್ರದಲ್ಲಿ ಬರೆದರು. ಹೌದು, ನೀವು ದೊಡ್ಡದು ಅಥವಾ ಚಿಕ್ಕದು ಯಾವ ವಿಷಯಕ್ಕಾದರೂ ಕೇಳಬಹುದು. ಹೀಗಾಗಿ ಬೆಳಕನ್ನು ಸಂಗಾತಿಯನ್ನಾಗಿ ಮಾಡಿಕೊಳ್ಳುವುದು ಆಧ್ಯಾತ್ಮಿಕ ಗುರಿಯಾಗಿರಬೇಕು.

ಬೆಳಕಿನ ಬಗ್ಗೆ ಇಷ್ಟೆಲ್ಲಾ ಮಾತನಾಡಿದರೂ, ಈಗಲೂ ಕೂಡಾ ಕೆಲವು ಜನರು ಬೆಳಕನ್ನು ಅರ್ಥಮಾಡಿಕೊಂಡಿಲ್ಲ. ಅದು ಭೌತಿಕ ಬೆಳಕಲ್ಲ. ಬೆಳಕು ದೇವರು. ಬೆಳಕಿಗೆ ಬುದ್ಧಿಶಕ್ತಿ ಇದೆ ಮತ್ತು ಮೊದಲ ಸೃಷ್ಟಿಯೇ ಬೆಳಕು. ಬೆಳಕು ಪ್ರತಿಯೊಂದನ್ನೂ ಅಂದರೆ ಪ್ರೀತಿ, ಶಾಂತಿ, ಸಂತೋಷ ಹಾಗೂ ಜೀವನ ಮತ್ತು ಜೀವಿಸಲು ಸಹಾಯಕರವಾಗಿರುವ ಎಲ್ಲವನ್ನೂ ಒಳಗೊಂಡಿರುತ್ತದೆ. ನಾವು ಬೆಳಕನ್ನು ಅರ್ಥ ಮಾಡಿಕೊಳ್ಳಬೇಕು.

ನಾವು ಇಡೀ ಪ್ರಪಂಚದ ಜೊತೆ ಒಂದಾಗಿದ್ದರೆ, ಪ್ರಪಂಚದ ದುಃಖವನ್ನು ಮತ್ತು ಶಾಂತಿ, ಸಂತೋಷಗಳನ್ನು ಅನುಭವಿಸುತ್ತೇವೆ. ನಾವು ಪ್ರಪಂಚವನ್ನು ಪ್ರೀತಿಸಲು ಆರಂಭಿಸಬೇಕು. ಧ್ಯಾನಗಳನ್ನು ತೆಗೆದುಕೊಂಡ ಮೇಲೆ, ಋಷಿಗಳ ಮಾರ್ಗಕ್ಕೆ ಸೇರಿಕೊಂಡ ಮೇಲೆ ನಮ್ಮ ವ್ಯಕ್ತಿತ್ವ ವಿಸ್ತರಣೆ ಮಾಡಬೇಕು ಮತ್ತು ಏಕತೆಯನ್ನು ಅನುಭವಿಸಬೇಕು. ಆಗ ವಿಶ್ವವೂ ಸಹಾಯ ಮಾಡುತ್ತದೆ. ಈ ವಿಷಯದ ಬಗ್ಗೆ ಚಿಂತಿಸಿ.

ಜೀವನದಲ್ಲಿ ಕಷ್ಟಕರ ಅವಧಿಯಲ್ಲಿ ನಿಮಗೆ ಧ್ಯಾನ ಮಾಡಲು ಆಗದಿದ್ದರೆ ಚಿಂತಿಸಬೇಡಿ. ನೀವು ಋಷಿಗಳೊಂದಿಗೆ ಇದ್ದರೆ ಸಾಕು. ನೀವು ಆ ಪರಿಸ್ಥಿತಿಯಿಂದ ಬೇಗನೆ ಹೊರಬರುವಿರಿ ಮತ್ತು ಧ್ಯಾನವನ್ನು ಕೈಗೆತ್ತಿಕೊಳ್ಳುವಿರಿ. ನಾವು ನಿಮ್ಮೊಡನೆ ಇದ್ದೇವೆ.

ಜನರು ಪ್ರಶ್ನೆಗಳನ್ನು ಕೇಳುವುದಕ್ಕೆ ನಾನು ಯಾವಾಗಲೂ ಪ್ರೋತ್ಸಾಹಿಸುತ್ತೇನೆ, ಆದರೆ ಹೆಚ್ಚಿನ ಮಾಹಿತಿಯನ್ನು ಒಳಗೊಂಡಿರುವ ನಮ್ಮ ವೆಬ್‌ಸೈಟ್ ಮತ್ತು ಪುಸ್ತಕಗಳನ್ನು ಓದಿದ ನಂತರ. ಕೆಲವು ಸಲ ಜನರು ವಾದ ಮಾಡಲು ಆರಂಭಿಸುತ್ತಾರೆ. ವಾದ, ಸತ್ಯವನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುವುದಿಲ್ಲ. ಬಹುಶಃ ಧ್ಯಾನಗಳು ಮತ್ತು ಅಂತರ್ ಗ್ರಹಣಶಕ್ತಿ ಬಳಸುವುದರಿಂದ ಸತ್ಯವನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಿದೆ. ಆದ್ದರಿಂದ ಈ ವಿಧಾನವನ್ನು ಆರಿಸಿಕೊಳ್ಳಿ.

**28–11–2010**

ಬೆಳಕಿನ ಸಾಗರವನ್ನು ದೀರ್ಘಕಾಲದವರೆಗೆ ಅನುಭವಿಸುವುದು ಜ್ಞಾನೋದಯದ ಅತ್ಯುನ್ನತ ಹಂತಕ್ಕೆ ತೆಗೆದುಕೊಂಡು ಹೋಗುತ್ತದೆ.

ನಾವು ಜೀವನವನ್ನು ಪೂರ್ಣವಾಗಿ ಅನುಭವಿಸಲು ಇಲ್ಲಿದ್ದೇವೆ. ಇದರೊಟ್ಟಿಗೇ ನಾವು ಮತ್ತೆ ಪರಬ್ರಹ್ಮನಲ್ಲಿಗೆ ಹಿಂದಿರುಗಲು ಧ್ಯಾನಗಳಿಂದ ಪ್ರಾರಂಭಿಸಬೇಕು.

ಧ್ಯಾನವನ್ನು ಹೇಳಿಕೊಡುವುದು ಮತ್ತು ತಂತ್ರಗಳಲ್ಲಿ ತರಬೇತಿ ಕೊಡುವುದಷ್ಟೇ ಅಲ್ಲದೆ, ಈ ಜೀವನವನ್ನು ಪೂರ್ಣವಾಗಿ ಬದುಕಲು ಮಾರ್ಗದರ್ಶಿಸುವುದು ನನ್ನ ಕೆಲಸ. ನೀವು ಸಂಗೀತವನ್ನು ಕೇಳಬೇಕು, ಕಾವ್ಯವನ್ನು ಮೆಚ್ಚಬೇಕು, ಪುಸ್ತಕಗಳನ್ನು ಓದಬೇಕು, ಪ್ರಕೃತಿಯನ್ನು ನೋಡಿ ಸಂತೋಷಪಡಬೇಕು. ಸಜ್ಜನರ ಸಹವಾಸದಲ್ಲಿ ಸಮಯ ಕಳೆಯಬೇಕು ಇತ್ಯಾದಿ. ನನ್ನ ಕೆಲಸವೆಂದರೆ ನಕಾರಾತ್ಮಕತೆಯನ್ನು ನಿರ್ವಹಿಸಲು ಜನಗಳಿಗೆ ಸಹಾಯ ಮಾಡುವುದು. ಇದು ಕೆಲವು ಸಲ ನಮಗೆ ಚೈತನ್ಯಗಳ ಮೂಲಕ ನೇರವಾಗಿ ನಕಾರಾತ್ಮಕ ಜನರೊಂದಿಗೆ ವ್ಯವಹರಿಸಲು ಮತ್ತು ಪ್ರತಿಯೊಂದು ವಿಷಯದಲ್ಲಿ ಮಾರ್ಗದರ್ಶಿಸಲು ಬರುತ್ತದೆ. ನನ್ನ ಕೆಲಸ ನಿಮಗೆ ಬೆಳಕನ್ನು ಪರಿಚಯಿಸುವುದು. ಬೆಳಕು ನಮ್ಮ ಗುರು, ಮಾರ್ಗದರ್ಶಕ ಮತ್ತು ಎಲ್ಲವೂ ಎಂಬುದನ್ನು ನಾವು ಅರಿಯಬೇಕು. 2012ರ ಬದಲಾವಣೆಗಳನ್ನು ಎದುರಿಸಲು ಜನರಿಗೆ ನಾನು ಸಹಾಯ ಮಾಡಬೇಕಾಗಿದೆ.

2012ರ ಬಗ್ಗೆ ನಕಾರಾತ್ಮಕತೆಯನ್ನು ಹರಡುವ ಜನರು ಕೂಡಾ ಹೆಚ್ಚಿನ ಮಾಹಿತಿ ನೀಡುತ್ತಾರೆ. ಇದರಿಂದ ಜನರು ಭಯಭೀತರಾಗಿದ್ದಾರೆ, ಗೊಂದಲಕ್ಕೆ ಒಳಗಾಗಿದ್ದಾರೆ. ನನ್ನ ಕಾರ್ಯ ವಿಕೃತ ಜ್ಞಾನವನ್ನು ಅರ್ಥ ಮಾಡಿಕೊಳ್ಳಲು ಮತ್ತು ನಿಜವಾದ ಜ್ಞಾನ ಹೊರತರಲು ಸಹಾಯ ಮಾಡುವುದಾಗಿದೆ. ನೀವು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಬೇಕು ಮತ್ತು ಜಾಗರೂಕರಾಗಿರಬೇಕು. ಋಷಿಗಳು ಕೊಟ್ಟಿರುವ ಸೂಚನೆಗಳನ್ನು ಅನುಸರಿಸಿ, ಧ್ಯಾನಿಸಿ ಮತ್ತು ಇತರ ವಿಶೇಷ ತಂತ್ರಗಳನ್ನು ಅಭ್ಯಾಸ ಮಾಡಿ. ಇದ್ದಕ್ಕಿದ್ದಂತೆ ನೀವು ಋಷಿಗಳನ್ನು ನೋಡಲು, ಅವರೊಡನೆ ಮಾತನಾಡಲು ಶಕ್ತರಾಗುವಿರಿ. ನಾವು ಋಷಿಗಳು ಅಥವಾ ದೇವರೊಂದಿಗೆ ಶ್ರುತಿಗೂಡಿಸಿಕೊಂಡರೆ ಎಲ್ಲವೂ ತಕ್ಷಣ ಸಿಗುತ್ತದೆ. ನಮ್ಮ ದೇಹಗಳು ಬೆಳಕಿನ ದೇಹಗಳಾಗುತ್ತವೆ, ನನ್ನ ಕೆಲಸ ಸಪ್ತರ್ಷಿಗಳ ಈ ಕೇಂದ್ರವನ್ನು ಅಭಿವೃದ್ಧಿಪಡಿಸುವುದು ಕೂಡಾ ಆಗಿದೆ.

ಒಂದು ನಿರ್ಮಲ ಸರಳ ಬಾಂಧವ್ಯದಲ್ಲಿ ಯಾವುದೇ ಷರತ್ತುಗಳಿರುವುದಿಲ್ಲ. ಅಲ್ಲಿ ಚೈತನ್ಯಗಳ, ಜ್ಞಾನದ, ಪ್ರೀತಿಯ ಮತ್ತು ಬೆಳಕಿನ ಸಹಜವಾದ ಹರಿವು ಇನ್ನೊಂದು ಹಂತದಲ್ಲಿ ಉಂಟಾಗುತ್ತದೆ; ಸಂಪರ್ಕ ಸ್ಥಾಪಿತವಾಗುತ್ತದೆ. ಒಬ್ಬ ವ್ಯಕ್ತಿ ಸಿದ್ಧವಾಗಿದ್ದರೆ, ತೆರೆದ ಹೃದಯದವರಾದರೆ ಇಂಥ ಒಂದು ರೀತಿಯ ಪರಿವರ್ತನೆ, ಒಂದು ಹರಿವು ಉಂಟಾಗುತ್ತದೆ.

ಯಾರೋ ಒಬ್ಬರು ಹೇಳಿದರು, "ನಾವು ಹಿಂದಿರುಗಿ ಹೋಗಿ, ಅಲ್ಲಿ ವಿಲೀನವಾದರೆ ನಮ್ಮ ಎಲ್ಲ ನೆನಪುಗಳನ್ನು, ನಮ್ಮೆಲ್ಲ ಸಾಧನೆಗಳನ್ನು ಇತ್ಯಾದಿ ಕಳೆದುಕೊಳ್ಳುತ್ತೇವೆ ಎಂದು ಬಹಳ ದುಃಖವಾಗುತ್ತದೆ." ದೇವರ ಪ್ರಪಂಚದಲ್ಲಿ ಅದ್ಭುತ ವಿಷಯಗಳಿವೆ ಆದರೆ ನಾವಿಲ್ಲಿ ಹೆಚ್ಚಿನದನ್ನು ಸಾಧಿಸಿದ್ದೇವೆ ಎಂದು ಆಲೋಚಿಸುತ್ತೇವೆ! ಜನರು ಆಲಿಸುವುದಕ್ಕೆ ನಿರಾಕರಿಸುತ್ತಾರೆ ಮತ್ತು ಅರ್ಥ ಮಾಡಿಕೊಳ್ಳಲು ನಿರಾಕರಿಸುತ್ತಾರೆ.

ಅನುಭಾವದ ದಿವ್ಯಜ್ಞಾನಕ್ಕೆ ಯಾವ ಸಾಕ್ಷ್ಯಾಧಾರಗಳಿಲ್ಲ. ಅದನ್ನು ಅನುಭವದಿಂದ ನಾವು ತಿಳಿಯುತ್ತೇವೆ. ಒಬ್ಬ ನಿಜವಾದ ಗುರು ತಪ್ಪುದಾರಿಗೆಳೆಯುವುದಿಲ್ಲ. ■

## ಹೊರಗಿನವರಿಗೆ ಧ್ಯಾನಕಲಿಕೆ

ಧ್ಯಾನದ ತರಗತಿಗಳಿಗೆ ಬರಲು ಸಾಧ್ಯವಿಲ್ಲದಿರುವವರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನ ಕಲಿಸಲಾಗುವುದು. ಇಂಗ್ಲಿಷ್‌ನಲ್ಲಿ (ವರ್ಷಕ್ಕೆ ರೂ. 1000/–), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 700/–) ಪಾಠಗಳನ್ನು ಕಳುಹಿಸಲಾಗುವುದು.

ವಾರ್ಷಿಕ ಫ಼ೀನಲ್ಲಿ ಪಠ್ಯ ಪುಸ್ತಕಗಳು ಮತ್ತು ವಾರ್ತಾಪತ್ರಿಕೆಯ ಒಂದು ವರ್ಷದ ಚಂದಾ ಸೇರಿರುತ್ತದೆ.

- ಎಲ್ಲಾ ಸೂಚನೆಗಳನ್ನು ಪೋಸ್ಟ್ ಅಥವಾ ಇ–ಮೇಲ್ ಮೂಲಕ (ಆಯ್ಕೆ ಮಾಡಿದಂತೆ) ಆಯಾ ಭಾಷೆಯಲ್ಲಿ ಕಳುಹಿಸಿ ಕೊಡಲಾಗುವುದು.
- ಸೂಕ್ಷ್ಮ ಮಟ್ಟದಲ್ಲಿ, ಋಷಿಗಳು ದೀಕ್ಷೆಯನ್ನು ಕೊಡುತ್ತಾರೆ ಮತ್ತು ಸಾಧನೆಯ ಪ್ರಗತಿಯನ್ನು ಗಮನಿಸುತ್ತಾರೆ.
- ಎಲ್ಲಾ ಪ್ರಶ್ನೆಗಳಿಗೆ ಮತ್ತು ಸಂದೇಹಗಳಿಗೆ ಗುರೂಜಿಯವರೇ ಉತ್ತರಿಸುತ್ತಾರೆ.
- ನಮ್ಮ ಮಾರ್ಗ ಮತ್ತು ಸಾಧನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳು ನಮ್ಮ ಎಲ್ಲ ಪುಸ್ತಕಗಳನ್ನು ಓದಬೇಕು.
- ಅಭ್ಯಾಸದ ವರದಿಗಳನ್ನು ಸಕಾಲಕ್ಕೆ ತಲುಪಿಸಬೇಕು. ಸಕಾಲಕ್ಕೆ ವರದಿ ಬಾರದಿದ್ದರೆ, ವಿದ್ಯಾರ್ಥಿ ಧ್ಯಾನ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುತ್ತದೆ.

**ಚೆಕ್/ಡಿಡಿಗಳನ್ನು "ಮಾನಸ ಲೈಟ್ ಏಜ್ ಫೌಂಡೇಶನ್(ರಿ)" ಹೆಸರಲ್ಲಿ ಕಳುಹಿಸಬೇಕಾಗುತ್ತದೆ. ಬೆಂಗಳೂರೇತರ ಚೆಕ್‌ಗಳಿಗೆ 50ರೂ. ಹೆಚ್ಚಿಗೆ ಸೇರಿಸಬೇಕಾಗುತ್ತದೆ.**

## ಗುರೂಜಿಯವರಿಂದ ವಿಶೇಷ ಸೂಚನೆಗಳು

- ತಾಳ್ಮೆ ಇರಲಿ. ಮೊದಲನೆಯ ದಿನವೇ ಸಮಾಧಿಯ ಅನುಭವವನ್ನು ನಿರೀಕ್ಷಿಸಬೇಡಿ. ಪವಾಡಗಳನ್ನು ನಿರೀಕ್ಷಿಸಬೇಡಿ. ನಾವು ಶ್ರದ್ಧೆಯಿಂದ ಸಾಧನೆಯನ್ನು ಮುಂದುವರಿಸಿದರೆ ಪವಾಡಗಳು ಸದ್ದಿಲ್ಲದೆ ನಡೆಯುತ್ತವೆ.
- ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಸೆಣಸಾಟಗಳನ್ನೆದುರಿಸುತ್ತಾರೆ. ಆದರೆ ಸಾಧನೆ ಮುಂದುವರಿದಂತೆ ಎಲ್ಲ ಕರಗಿಹೋಗುತ್ತವೆ.
- ಪ್ರತಿಯೊಬ್ಬರಿಗೂ ತಮ್ಮದೇ ಆದ ಅನುಭವಗಳಾಗುತ್ತವೆ. ಆದರೆ ಅವುಗಳ ಕಡೆ ಹೆಚ್ಚು ಗಮನ ಕೊಡಬಾರದು. ಅನುಭವಗಳು ಒಳ್ಳೆಯದು. ಆದರೆ ಅವು ಸಾಧನೆಯಲ್ಲಿ ಪ್ರಗತಿಯನ್ನು ಅಳೆಯುವುದಿಲ್ಲ.
- ಧ್ಯಾನ ಮಾಡುವಾಗ, ಧ್ಯಾನದ ಕ್ರಿಯೆಗಳನ್ನು ವಿಶ್ಲೇಷಿಸಬಾರದು. ವಿಶ್ಲೇಷಣೆ ಧ್ಯಾನಕ್ಕೆ ಸಹಾಯ ಮಾಡುವುದಿಲ್ಲ.
- ಧ್ಯಾನ ಮಾಡುವಾಗ, ಯೋಚನೆಗಳು ಸಾಮಾನ್ಯ. ಅದರಿಂದ ತಲೆಕೆಡಿಸಿ ಕೊಳ್ಳಬಾರದು. ಯೋಚನೆಗಳನ್ನು ಓಡಿಸಲು ಪ್ರಯತ್ನ ಮಾಡಬಾರದು. ಅವುಗಳನ್ನು ಗಮನಿಸದೆ ಇರುವುದು ಉತ್ತಮ. ಬೇರೆ ದಾರಿಯೇ ಇಲ್ಲ.

## ಪತ್ರಗಳು

ಸಂ: ವೈಶಾಲಿ ಜೋಶಿ; ಅನು: ಸುಧಾಕರ್

'ಸಂಬಂಧ ಒಂದು ಜವಾಬ್ದಾರಿ ಕೂಡ' ಮತ್ತು ಇದು 'ಕೊಡು–ಪಡೆ ಸಂಬಂಧ' ಎಂಬ ನಿಮ್ಮ ಮಾತುಗಳಿಂದ ಪುಳಕಿತಗೊಂಡೆ. ಇಂದಿನ ಪ್ರಪಂಚದಲ್ಲಿ ಗುರು–ಶಿಷ್ಯ ಸಂಬಂಧದಲ್ಲಿನ ಬದ್ಧತೆ ಅನೇಕರಲ್ಲಿ ಶಿಥಿಲಗೊಂಡಿದೆ. ಸಂಬಂಧಕ್ಕೆ ಸಂಬಂಧಿಸಿದ ಕರ್ತವ್ಯಗಳಿಗೆ ಮತ್ತು ಕೆಲಸಗಳಿಗೆ ನಾನು ಸ್ಪಂದಿಸುತ್ತಿಲ್ಲವೆಂದು ನನಗೆ ಅನೇಕ ಸಲ ಅನ್ನಿಸಿದೆ. ಆದರೆ ನೀವು ಯಾವಾಗಲೂ, 'ನಿನ್ನ ಕರ್ತವ್ಯವನ್ನು ಮಾಡು, ಅದೇ ಸಾಧನ' ಎಂದು ತಿಳಿಸಿ ಸಂತೈಸಿದ್ದೀರಿ. ನನ್ನ ಸುತ್ತಮುತ್ತ ಬದಲಾವಣೆಗಳಾಗಿವೆ. ನಾನು ಮಾಡುವ ಎಲ್ಲ ಕೆಲಸಗಳಲ್ಲಿ ನಿಮ್ಮ ಚೈತನ್ಯಗಳು ಹರಿಯುತ್ತಿವೆ ಮತ್ತು ಅವು ಸುತ್ತಲಿನ ಎಲ್ಲ ಜನರಲ್ಲಿ ಪ್ರತಿಬಿಂಬಿಸುತ್ತವೆ. –ಟಿ. ನಾಗರಾಜ್

ಪ್ರತಿರಾತ್ರಿ ಬೆಳಕನ್ನು ಮತ್ತು ಪ್ರೀತಿಯನ್ನು ನನ್ನಲ್ಲಿ ತುಂಬಿಕೊಳ್ಳುವುದರಿಂದ ಮತ್ತು ನಿಮ್ಮ ಬಗ್ಗೆ ಯೋಚಿಸುವುದರಿಂದ, ಬೆಳಕಿನೊಂದಿಗೆ ಸುಲಭವಾಗಿ ಸಂಪರ್ಕ ಪಡೆಯಲು ಸಾಧ್ಯವಾಗಿದೆ. ಒಬ್ಬ ವ್ಯಕ್ತಿಯಿಂದ ಇರಬಹುದು ಅಥವಾ ಸುಮ್ಮನೆ ಎತ್ತಿಕೊಂಡ ಒಂದು ಪುಸ್ತಕದಿಂದ ಇರಬಹುದು, ಸಹಾಯ ಯಾವಾಗಲೂ ಸಿಗುತ್ತದೆ. ಪ್ರಾಮಾಣಿಕ ಸಂದರ್ಭಗಳಲ್ಲಿ ಸಮಯ ನಿಧಾನವಾಗಿ ಸರಿಯುತ್ತದೆ ಮತ್ತು ಸಮಯ ಕೂಡ ಪ್ರೀತಿ ಮತ್ತು ಕರುಣೆಯಿಂದ ಸಹಾಯ ನೀಡುತ್ತದೆ. ಕೆಲವೊಮ್ಮೆ ಹೀಗೆ ಸಹಾಯ ಸಿಗದಿದ್ದಾಗ, ನಮ್ಮ ಬುದ್ಧಿಯನ್ನು ಉಪಯೋಗಿಸಿಕೊಂಡು ನಾವು ಕಲಿಯಬೇಕು ಮತ್ತು ಬೆಳೆಯಬೇಕು ಎನ್ನುವುದರ ಸ್ಪಷ್ಟ ಸೂಚನೆ ಇದು. – ಪ್ರಗತಿರಾಜ್

ಬೆಳಕು ನನ್ನ ಜೊತೆ ಯಾವಾಗಲೂ ಇದೆ ಮತ್ತು ನನಗೆ ದಾರಿ ತೋರಿಸುತ್ತದೆ ಎಂದು ನಾನು ಯಾವಾಗಲೂ ಯೋಚಿಸುತ್ತೇನೆ. ಇದು ನನ್ನ ಆತ್ಮಶಕ್ತಿಯನ್ನು ಹೆಚ್ಚಿಸಿದೆ ಮತ್ತು ಈಗ ನಾನು ನನ್ನ ಸುತ್ತಲಿನ ಜನರನ್ನು ಉತ್ತಮವಾಗಿ ನಿಭಾಯಿಸಬಲ್ಲೆ. ಅತಿ ಸಣ್ಣ ವಿಷಯಗಳಿಗೂ ಋಷಿಗಳಿಂದ ಮತ್ತು ಬೆಳಕಿನಿಂದ ನನಗೆ ಸಹಾಯ ಸಿಗುತ್ತದೆ. ಕೆಲವೊಮ್ಮೆ ನನ್ನ ಮಧ್ಯಾಹ್ನದ ಊಟ ತಡವಾದಾಗ ನಾನು ಬೆಳಕಿನಿಂದ ಜೀವಿಸುತ್ತಿದ್ದೇನೆ ಎಂದು ಯೋಚಿಸುತ್ತೇನೆ, ಆಗ ಆಯಾಸವಿಲ್ಲದೆ ಉತ್ಸಾಹದಿಂದ ಕೆಲಸ ಮಾಡಲು ಸಾಧ್ಯವಾಗುತ್ತದೆ. –ಧನಶ್ರೀ ಕುಲಕರ್ಣಿ

ನಾವು ಒಂಟಿಯಾಗಿದ್ದಾಗ ದೇವರು ಮತ್ತು ಋಷಿಗಳು ನಮ್ಮನ್ನು ಹೇಗೆ ನೋಡಿಕೊಳ್ಳುತ್ತಾರೆ ಎನ್ನುವುದನ್ನು ನಾನು ಈಗ ನೋಡುತ್ತಿದ್ದೇನೆ. ಒಂದು ಹೆಣ್ಣು ಹೇಗೆ ಒಂಟಿಯಾಗಿರಲು ಸಾಧ್ಯ ಎಂದು ನಾನು ಯಾವಾಗಲೂ ಆಶ್ಚರ್ಯಪಡುತ್ತಿದ್ದೆ. ಅನೇಕಸಲ ಬಿಡುವಿಲ್ಲದ ಕೆಲಸದಿಂದ ಆಯಾಸಗೊಂಡು ಸರಿರಾತ್ರಿಯ ನಂತರ ನಿದ್ದೆಹೋದರೂ, ಗಡಿಯಾರದ ಸಹಾಯವಿಲ್ಲದೆ ಬೆಳಿಗ್ಗೆ ಸರಿಯಾದ ಸಮಯಕ್ಕೆ ನನ್ನನ್ನು ಎಚ್ಚರಗೊಳಿಸುತ್ತಾರೆ. ನಿಮ್ಮ ಎಲ್ಲ ಸಹಾಯಗಳಿಗೂ ಅನೇಕ ಧನ್ಯವಾದಗಳು. – ಪೂರ್ಣಿಮಾ ಪೆಮ್ಮಯ್ಯ

ಎಲ್ಲ ರೀತಿಯಲ್ಲೂ, ಪ್ರತಿದಿನವೂ ಬೆಳಕು ನಮಗೆ ಸಹಾಯ ಮಾಡುತ್ತದೆ. ಅನೇಕ ವಿಸ್ಮಯ ಘಟನೆಗಳು ಜರುಗುತ್ತವೆ ಮತ್ತು ನನ್ನ ಹತ್ತಿರದವರನ್ನೊಳಗೊಂಡು ಅನೇಕ ವ್ಯಕ್ತಿಗಳಲ್ಲಿ ಸಕಾರಾತ್ಮಕ ಬದಲಾವಣೆಗಳನ್ನು ಕಂಡಿದ್ದೇನೆ. ಸಹಾಯ ಬರುತ್ತದೆ, ಅದಕ್ಕಾಗಿ ನಾವು ಮಾಡಬೇಕಾಗಿರುವುದಿಷ್ಟೆ – ಬೆಳಕನ್ನು ಸಂಪರ್ಕಿಸುವುದು ಮತ್ತು ನಮ್ಮ ಅಂತರಾಳದಿಂದ ನಂಬುವುದು. ಬೆಳಕು ಯಾವಾಗಲೂ ನನ್ನನ್ನು ರಕ್ಷಿಸುತ್ತದೆ, ಅಷ್ಟೇ ಅಲ್ಲ ಅದು ನಾನು ಕೆಲಸಮಾಡುವ ಜಾಗದಲ್ಲಿರುವ ಬೆಕ್ಕನ್ನು ಕೂಡ ಗುಣಪಡಿಸುತ್ತಿದೆ! ಮಾರ್ಗದರ್ಶಿಶಕ್ತಿಯ ಉಪಸ್ಥಿತಿ ತುಂಬ ಸಾಂತ್ವನ ನೀಡುತ್ತದೆ. ದೇವರು, ಬೆಳಕಿನ ಮಾಸ್ಟರ್‌ಗಳು ಮತ್ತು ನೀವು ನನಗೆ ಕೊಡುತ್ತಿರುವ ಮಾರ್ಗದರ್ಶನ, ಬೆಳಕು ಮತ್ತು ಪ್ರೀತಿಗಳಿಗಾಗಿ ನನ್ನ ಪ್ರೀತಿ ಮತ್ತು ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. –ಜೆನ್ನಿಫರ್ ಡಯಾನೆಜ್

ನಾನು ಈಗ ಬೆಳಕಿನ ಬಗ್ಗೆ ಹೆಚ್ಚು ಯೋಚಿಸುತ್ತೇನೆ ಮತ್ತು ನನ್ನ ಸುತ್ತಲೂ ಅದರ ಇರುವಿಕೆಯನ್ನು ಅನುಭವಿಸುತ್ತೇನೆ. ಎಲ್ಲ ಸಂದರ್ಭಗಳಲ್ಲೂ ಸಕಾರಾತ್ಮಕವಾಗಿ ನಡೆದುಕೊಳ್ಳುತ್ತೇನೆ ಮತ್ತು ಈಗ ಉತ್ತಮ ಯೋಜನೆಗಳನ್ನು ಮಾಡಬಲ್ಲವನಾಗಿದ್ದೇನೆ. ಎರಡು ಸಲ, ನನ್ನ ಬೆಲೆಬಾಳುವ ವಸ್ತುಗಳನ್ನು, ಬೆಳಕಿಗೆ ಪ್ರಾರ್ಥಿಸಿದ ಕೆಲವು ನಿಮಿಷಗಳಲ್ಲಿಯೇ ಹುಡುಕಿ ಪುನಃ ಪಡೆದುಕೊಳ್ಳಲು ನನಗೆ ಸಾಧ್ಯವಾಯಿತು. ಅದು ಒಂದು ವಿಸ್ಮಯ! ಧನ್ಯವಾದಗಳು. –ಅರುಣ್ ತ್ಯಾಗರಾಜನ್

ಪ್ರತಿ ಸಲ ನಾನು ರಕ್ಷಾಕವಚವನ್ನು ಬಲಪಡಿಸಿಕೊಂಡಾಗಲೂ ಅದು ನಾನು ಅಭದ್ರತೆಯ ಸಂದರ್ಭಗಳಿಂದ ಹೊರಬರಲು ಸಹಾಯಮಾಡುತ್ತದೆ. ಆದ್ದರಿಂದ ಅದನ್ನು ಬಲಪಡಿಸಿಕೊಳ್ಳುವುದು ನಿಜವಾಗಿಯೂ ಅವಶ್ಯವಿತ್ತು ಎಂದು ನನಗೆ ಅನ್ನಿಸುತ್ತದೆ. ನಾನೀಗ ಸಮಸ್ಯೆ ಎನ್ನಿಸಿಕೊಳ್ಳಬಹುದಾದ ಸಂಗತಿಗಳಿಗೆ ಹೆಚ್ಚು ಪ್ರತಿಸ್ಪಂದಿಸುತ್ತಿಲ್ಲ. ವಿಶ್ವದ ಮಟ್ಟದಲ್ಲಿ ನೋಡಿದಾಗ ಇವು ತುಂಬ ನಿಕೃಷ್ಟವಾಗಿ ಕಾಣುತ್ತವೆ. ಒಂದು ವಿಷಯ ವೈಯಕ್ತಿಕವಾಗಿ ನನಗೆ ಇಷ್ಟವಾಗಲಿ ಅಥವಾ ಇಷ್ಟವಾಗದಿರಲಿ, ಆಗುತ್ತಿರುವ ಪ್ರತಿಯೊಂದೂ ಸರಿ ಇದೆ ಎಂಬ ನಂಬಿಕೆ ನನಗುಂಟಾಗುತ್ತಿದೆ. –ಲಿಂಡಾ ಸಾಯರ್

## ಪ್ರಶ್ನೆಗಳು ಮತ್ತು ಉತ್ತರಗಳು

(ಸಂಗ್ರಹ: ಶೋಭಾ ಕೆ. ರಾವ್; ಅನು: ಉಷಾ ವಾಸನ್)

**ಪ್ರ: ನೀವು ನಮ್ಮ ವೈಯಕ್ತಿಕ ಭೇಟಿಯಲ್ಲಿ ಚೈತನ್ಯಗಳನ್ನು ನಿಮ್ಮದೇ ಮೂಲದಿಂದ ವರ್ಗಾಯಿಸುತ್ತೀರಾ?**

ಉ: ಕೆಲವೊಮ್ಮೆ ನಾನು ಹಾಗೆ ಮಾಡುತ್ತೇನೆ. ಆದರೆ ಹೆಚ್ಚಿನ ಸಲ ನಾನು ಋಷಿಗಳಿಂದ ಮತ್ತು ದೇವರಿಂದ ಈ ಚೈತನ್ಯಗಳನ್ನು ತೆಗೆದುಕೊಳ್ಳುತ್ತೇನೆ.

**ಪ್ರ: ನಿಮ್ಮ ಚೈತನ್ಯಗಳನ್ನು ನೀವು ಎಲ್ಲಿ ಶೇಖರಿಸುತ್ತೀರಿ?**

ಉ: ನನ್ನ ದೇಹ-ಮನಸ್ಸು-ಬುದ್ಧಿ ವ್ಯವಸ್ಥೆಯಲ್ಲಿ, ನನ್ನ ಆಧ್ಯಾತ್ಮಿಕ ದೇಹ – ಆನಂದಮಯ ಕೋಶದಲ್ಲಿ ಮತ್ತು ನನ್ನ ಉನ್ನತ ಆತ್ಮದಲ್ಲಿ ಚೈತನ್ಯಗಳನ್ನು ಶೇಖರಿಸಿಡುತ್ತೇನೆ. ನನ್ನ ಉನ್ನತ ಆತ್ಮ, ಅನ್ಯ ಮತ್ತು ಉನ್ನತ ಪ್ರಪಂಚದಲ್ಲಿದೆ.

**ಪ್ರ: ಆಧ್ಯಾತ್ಮಿಕ ಅನುಭವಗಳು ಮತ್ತು ದೈವಿಕ ಅನುಭವಗಳ ನಡುವಿನ ವ್ಯತ್ಯಾಸವೇನು?**

ಉ: ಆಧ್ಯಾತ್ಮಿಕ ಅನುಭವಗಳೆಂದರೆ, ಅವು ಆತ್ಮದ ಅನುಭವಗಳು. ಉದಾಹರಣೆಗೆ ಸಮಾಧಿ. ಇದು ವೈಯಕ್ತಿಕ ಅನುಭವ. ಗ್ಯಾಲಕ್ಸಿಯ ಕೇಂದ್ರದಲ್ಲಿ ಒಂದು ರೀತಿಯ ನಿಶ್ಚಲತೆ ಇರುತ್ತದೆ. ಈ ಅಖಂಡ ವಿಶ್ವದಲ್ಲಿ ಮತ್ತು ಭೂಮಿಯ ಕೇಂದ್ರದಲ್ಲಿ ಒಂದು ರೀತಿಯ ನಿಶ್ಚಲತೆ ಇದೆ. ಈ ನಿಶ್ಚಲತೆ ವಿಶಾಲವಾಗಿದೆ ಮತ್ತು ವಿಶ್ವವ್ಯಾಪಿಯಾಗಿದೆ. ನಾವು ಅಂತಹ ನಿಶ್ಚಲತೆಯನ್ನು ಅನುಭವಿಸಿದಾಗ, ಅದು ದೈವಿಕ ಅನುಭವವಾಗಿರುತ್ತದೆ.

**ಪ್ರ: ನಮ್ಮ ಶರೀರದಲ್ಲಿ ಬೆಳಕಿನ ಪ್ರವೇಶ ದ್ವಾರ ಯಾವುದು?**

ಉ: ಸಾಮಾನ್ಯವಾಗಿ ನಾವು ಬೆಳಕು ಅಥವಾ ಚೈತನ್ಯಗಳನ್ನು ನಮ್ಮ ತಲೆಯಲ್ಲಿರುವ ಪ್ರವೇಶದ್ವಾರದಿಂದ ಪಡೆಯುತ್ತೇವೆ. ಆದರೆ ಕೆಲವು ತುಂಬ ಸೂಕ್ಷ್ಮವಾದ ಚೈತನ್ಯಗಳನ್ನು ಆತ್ಮ, ತಲೆಯಿಂದ ಮಾತ್ರವಲ್ಲದೆ ಎಲ್ಲ ಕಡೆಗಳಿಂದ ನೇರವಾಗಿ ಪಡೆಯುತ್ತದೆ.

**ಪ್ರ: ಬೆಳಕನ್ನು ಯಾವಾಗಲೂ ಹೊಂದಿರುವುದು ಹೇಗೆ?**

ಉ: ನೀವು ನಿಮ್ಮ ಶರೀರ-ವ್ಯವಸ್ಥೆಯಲ್ಲಿ ಬೆಳಕು ಇದೆ ಎಂದು ಊಹಿಸಿಕೊಳ್ಳಬೇಕು. ನೀವು ಬೆಳಕಿಗೆ ಯಾವಾಗಲೂ ನಿಮ್ಮ ಜೊತೆಯಲ್ಲಿರಬೇಕೆಂದು ವಿನಂತಿಸಿದರೆ ಅದು ನಿಮ್ಮೊಡನಿರುತ್ತದೆ. ನಮಗೆ ಅದರ ಅರಿವು ಯಾವಾಗಲೂ ಇರಬೇಕೆಂದಿಲ್ಲ ಆದರೆ ನಾವು ಯಾವಾಗಲೂ ಬೆಳಕನ್ನು ಹೊಂದಿರಬಹುದು. ■

## ಮುಂಬೈ, ಪೂನಾ ಮತ್ತು ನಾಗಪುರದಲ್ಲಿ 2011 ಜನವರಿ ತಿಂಗಳಲ್ಲಿ ಗುರೂಜಿಯವರ ಕಾರ್ಯಕ್ರಮಗಳು

### ಮುಂಬೈ ಕಾರ್ಯಕ್ರಮ

29–1–2011, ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 1.00 ಘಂಟೆವರೆಗೆ
ಸ್ಥಳ : ಶಹನಾಯ್ ಹಾಲ್, ಸಹಯೋಗ ಕಟ್ಟಡ, ಲೂಯಿಸ್ ವಾಡಿ, ಸರ್ವೀಸ್ ರಸ್ತೆ, ಥಾಣೆ(ಪಶ್ಚಿಮ)– 400604
ರಿಜಿಸ್ಟರ್ ಮಾಡಲು ಶ್ರೀಮತಿ ಛಾಯಾ ಕೋಲ್ಟೆ ಇವರನ್ನು ಸಂಪರ್ಕಿಸಿ
Ph : 022–4040241339, Mob : 9821376797

### ಪೂನಾ ಕಾರ್ಯಕ್ರಮ

29–1–2011, ಸಾಯಂಕಾಲ 6.00 ರಿಂದ ರಾತ್ರಿ 8.00 ಘಂಟೆವರೆಗೆ
ಸ್ಥಳ : ಬಾಲಶಿಕ್ಷಣ ಮಂದಿರ ಸಭಾಗೃಹ, 131, ಮಯೂರ್ ಕಾಲನಿ, ಕೊತ್ರುಡ್ ಪೂನಾ – 411029
ರಿಜಿಸ್ಟರ್ ಮಾಡಲು ಶ್ರೀಮತಿ ಮೇಧಾ ಕುಲಕರ್ಣಿ ಇವರನ್ನು ಸಂಪರ್ಕಿಸಿ
Ph : 020–25882189, Mobile : 09730865306

### ನಾಗಪುರ ಕಾರ್ಯಕ್ರಮ

30–1–2011, ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 1.00 ಘಂಟೆವರೆಗೆ
ಸ್ಥಳ : ಮಾರುತಿ ಮಂದಿರ, ಉಜ್ವಲ ನಗರ, ವಾರ್ಧಾ ರಸ್ತೆ ನಾಗಪುರ – 440025
ರಿಜಿಸ್ಟರ್ ಮಾಡಲು ಶ್ರೀ ಪ್ರಭಾಕರ್ ದೇಶ್‌ಪಾಂಡೆ ಇವರನ್ನು ಸಂಪರ್ಕಿಸಿ
Ph : 0712 – 2291157

## ನಮ್ಮ ಪ್ರಕಟಣೆಗಳು

| | |
|---|---|
| Doorways to Light | 200/- |
| New Age Realities | 200/- |
| 2012 - End or Beginning | 100/- |
| iGuruji - Vol 1 | 150/- |
| iGuruji - Vol 2 | 120/- |
| iGuruji - Vol 3 | 150/- |
| Higher Communication & Other Realities | 100/- |
| Living in the Light of My Guru | 220/- |
| How to Meditate | 50/- |
| Dhyana Yoga | 50/- |
| Descent of Soul | 50/- |
| Practising Shambala Principles | 50/- |
| Astral Ventures of A Modern Rishi | 50/- |
| The Masters Answer | 120/- |
| Channelled Knowledge from the Rishis | 250/- |
| Channelled Knowledge from the Rishis-Vol-2 | 150/- |
| Guruji Speaks Part - I | 200/- |
| Guruji Speaks Part - II | 200/- |
| Guruji Speaks Vol - 3 | 150/- |
| The Book of Reflections - Vol 1 | 200/- |
| The Book of Reflections - Vol 2 | 200/- |
| Meditators on Meditations | 75/- |
| Meditators on Experiences | 75/- |
| Meditational Experiences | 150/- |
| Awareness | 60/- |
| Living in Light | 10/- |
| Light | 10/- |
| ಬೆಳಕಿಗೆ ಬಾಗಿಲುಗಳು | 150/- |
| ಋಷಿಗಳಿಂದ ಬಂದ ಜ್ಞಾನ | 150/- |
| ಐ-ಗುರೂಜಿ ಭಾಗ 1 | 150/- |
| ಐ-ಗುರೂಜಿ ಭಾಗ 2 | 120/- |
| ಉನ್ನತ ಸಂಪರ್ಕಗಳು | 100/- |
| ಅನಿಸಿಕೆಗಳು | 120/- |
| 2012 ಅಂತ್ಯ ಅಥವಾ ಆರಂಭ | 100/- |
| ಧ್ಯಾನ ಮಾಡುವುದು ಹೇಗೆ | 50/- |
| ಧ್ಯಾನ ಯೋಗ | 50/- |
| ಆತ್ಮದ ಅವರೋಹಣ | 50/- |
| ಶಂಬಲ ನಿಯಮಗಳ ಅಭ್ಯಾಸ | 50/- |
| ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು | 50/- |
| ಗುರೂಜಿ ನಾ ಕಂಡಂತೆ | 30/- |
| ಬೆಳಕಿನಲ್ಲಿ ಬದುಕುವುದು | 10/- |
| ಬೆಳಕು | 10/- |
| ದೈವಸಾಕ್ಷಾತ್ಕಾರಕ್ಕೆ ರಾಮಕೃಷ್ಣರ ಮಾರ್ಗದರ್ಶನ | 250/- |
| ಕಾವ್ಯಕಂಠ ವಸಿಷ್ಠ ಗಣಪತಿ ಮುನಿಗಳು | 100/- |
| ಆನೇಕಲ್ಲಿನ ಅಪರೂಪದ ವ್ಯಕ್ತಿಗಳು | 120/- |
| ऋषींकडून मिळालेले ज्ञान (Marathi) | 200/- |
| प्रकाशवाट (Marathi) | 150/- |
| २०१२ – अंत की आरंभ? (Marathi) | 100/- |
| आयगुरूजी (Marathi) | 100/- |
| ध्यान कसे करावे (Marathi) | 50/- |
| ध्यानयोग (Marathi) | 50/- |
| आत्म्याचे पृथ्वीवर अवतरण (Marathi) | 50/- |
| शंबला तत्त्वांचा अभ्यास (Marathi) | 50/- |
| एका आधुनिक ऋषीचे सूक्ष्मजगातील पराक्रम (Marathi) | 50/- |
| प्रकाशमय जीवन (Marathi) | 10/- |
| प्रकाश (Marathi) | 10/- |
| ध्यान कैसे करे (Hindi) | 50/- |
| ध्यान-योग (Hindi) | 50/- |
| प्रकाश (Hindi) | 10/- |
| प्रकाशमय जीवन (Hindi) | 10/- |
| प्रकाश की ओर (Hindi) | 150/- |
| தியானம் செய்வது எப்படி | 50/- |
| ஒளியின் வாயில்கள் | 200/- |
| 2012 முடிவா அல்லது தொடகமா | 100/- |
| ஒளியில் வாழ்க்கை | 10/- |
| ஒளி | 10/- |
| தியான யோகம் | 50/- |
| ஆத்மாவின் அவரோகணம் | 50/- |
| நவீன ரிஷி ஒருவரின் சூஷ்ம சாகசங்கள் | 50/- |
| சம்பலா நியமங்களின் அப்பியாசங்கள் | 50/- |
| ధ్యానం చేయ్యడం ఎలా | 50/- |
| వెలుగులో జీవించడం | 10/- |
| కాంతి | 10/- |
| కాంతికి ద్వారములు | 150/- |



**ಗುರೂಜಿ ಕೃಷ್ಣಾನಂದ (1939)**

## ಮಾನಸ ಫೌಂಡೇಶನ್ (ರಿ)

1988ರಲ್ಲಿ ಗುರೂಜಿ ಕೃಷ್ಣಾನಂದರಿಂದ ಸ್ಥಾಪನೆಯಾದ ಈ ಸಂಸ್ಥೆ ಜ್ಯೋತಿಕಾರ್ಯಕ್ಕೆ ಮೀಸಲಾಗಿದ್ದು, ತಪೋನಗರ ಮತ್ತು ಬೆಂಗಳೂರಿನಲ್ಲಿ ಧ್ಯಾನ ತರಗತಿಗಳನ್ನು ನಡೆಸುತ್ತದೆ.

### ಮಾನಸ

ಬೆಂಗಳೂರಿನಿಂದ ಇಪ್ಪತ್ತು ಕಿಲೋಮೀಟರ್ ದೂರದ ಚಿಕ್ಕಗುಬ್ಬಿ ಹಳ್ಳಿಯ ಬಳಿ ರೂಪುಗೊಳ್ಳುತ್ತಿರುವ ಧ್ಯಾನಾಭ್ಯಾಸಿಗಳ ಬಡಾವಣೆ. 1935ರಲ್ಲಿ ಅಮರರಿಗೆ ಇಲ್ಲಿ ಋಷಿಗಳ ಚಟುವಟಿಕೆಗಳ ಮತ್ತು ಭವಿಷ್ಯದಲ್ಲಿ ಸ್ಥಾಪನೆಯಾಗುವ ಬೆಳಕಿನ ನಗರದ ದರ್ಶನವಾಗಿತ್ತು. ವಿಶ್ವಚೇತನ ಮಂದಿರ, ಕುಂಡಲಿನಿ ಗೋಪುರ ಮತ್ತು ತಪೋವನ ಇಲ್ಲಿ ಧ್ಯಾನಮಾಡಲು ರೂಪುಗೊಂಡಿರುವ ವಿನೂತನ ಸ್ಥಳಗಳು. ತಪೋನಗರದ ಸುತ್ತಲೂ 'ಮಾನಸಿ' ಎಂಬ ವಿಭಿನ್ನ ಚೈತನ್ಯವಲಯವನ್ನು ನಿರ್ಮಿಸಿ, ಅದರಲ್ಲಿ ವಿಶೇಷ ಚೈತನ್ಯಗಳನ್ನು ಸಂಗ್ರಹಿಸಿಡಲಾಗಿದೆ.

### ಅಂತರ್ ಮಾನಸ

ಮಾನಸದ ಹುಟ್ಟು ಸ್ಥಳ. ಇದು ತಪೋನಗರದಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ನಾಡಗೌಡ ಗೊಲ್ಲಹಳ್ಳಿಯ ಹತ್ತಿರ ಇದೆ. ಅಲ್ಲಿ ಗುರೂಜಿಯವರು 1987 ರಿಂದ 1992 ರವರೆಗೆ ವಾಸಮಾಡಿದ ಒಂದು ಗುಡಿಸಲು ಮತ್ತು ಇತರೆ ಕಟ್ಟಡಗಳಿವೆ.

### ಅಧ್ಯಯನ ಕೇಂದ್ರ

ಇದು ಆಧ್ಯಾತ್ಮಿಕ ಸತ್ಯಗಳ ಅಧ್ಯಯನಕ್ಕಾಗಿ ಅಂತರ್ಮಾನಸದಲ್ಲಿ ಋಷಿಗಳ ಮಾರ್ಗದರ್ಶನದಲ್ಲಿರುವ ಒಂದು ವಿಶೇಷವಾದ ಅಧ್ಯಯನ ಕೇಂದ್ರ.

### ಜ್ಯೋತಿ ಪ್ರಾಜೆಕ್ಟ್

ಇದು ಮುಖ್ಯವಾಗಿ ಹಳ್ಳಿಯ ಮಕ್ಕಳಿಗೆ ಮೀಸಲಾದದ್ದು. ಅವರಿಗೆ ಶಾಲೆಯ ಪಾಠಗಳಲ್ಲಿ ನೆರವಾಗುವುದಲ್ಲದೆ ಶ್ಲೋಕಗಳು, ಶುಚಿತ್ವ, ಹಾಡುಗಳು, ಸಾಮಾನ್ಯಜ್ಞಾನ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಅಲ್ಲದೆ ಕಥೆಗಾರಿಕೆ, ಸಂಗೀತ ಮತ್ತು ಚಿತ್ರಕಲೆಗಳ ಮೂಲಕ ಅವರಲ್ಲಿನ ಸೃಜನಶೀಲತೆಯನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸಲಾಗುತ್ತದೆ.

### ಸಾರ್ವಜನಿಕರು

ಎಲ್ಲ ದಿನಗಳಲ್ಲೂ ಬೆಳಿಗ್ಗೆ 10ರಿಂದ 5ರ ನಡುವೆ ಧ್ಯಾನಮಾಡಲು ಇಲ್ಲಿಗೆ ಬರಬಹುದು.

### ವಿನಂತಿ

ದಯವಿಟ್ಟು ನಮ್ಮ ಸೇವಾಕಾರ್ಯಗಳಿಗೆ ನೆರವಾಗಿ. ('ಮಾನಸ ಫೌಂಡೇಶನ್'ನ ಹೆಸರಿನಲ್ಲಿ ಚೆಕ್/ಡಿಡಿ ಪಡೆಯಬಹುದು. 80–G ನಿಯಮದಡಿ ಆದಾಯ ತೆರಿಗೆಯ ರಿಯಾಯಿತಿ ಇದೆ.)

RNI. No. KARKAN/2003/13739 Registered Postal Regn. No. CPMG/KA/CNA-48/2009-11
Date of posting Newsletter-25th of Every Month. Posted at Bangalore GPO No. of Pages-8

# ಆಧ್ಯಾತ್ಮಿಕ ಅನುಭವಗಳು

(ಸಂಗ್ರಹ: ಶೋಭಾ ಕೆ. ರಾವ್; ಅನು: ಸ್ವರ್ಣಲತ)

ವ್ಯಾಸ ಮಹರ್ಷಿಗಳನ್ನು ಸಂಪರ್ಕಿಸುವ ಸೆಷನ್‌ನಲ್ಲಿ ನಾನು ಸಂಪರ್ಕಿಸಲು ಪ್ರಯತ್ನಿಸಿದಾಗ, ಅವರು ಒಂದು ಮರದ ಕೆಳಗೆ ಕುಳಿತು ಬರೆಯುವುದರಲ್ಲಿ ತಲ್ಲೀನರಾಗಿದ್ದುದನ್ನು ನೋಡಿದೆ. ಆಗ ನಾನು ಅವರೊಡನೆ ಮಾತುಕತೆಯನ್ನು ಹೇಗೆ ಆರಂಭಿಸುವುದೆಂದು ಕೇಳಿದೆ. ಅದಕ್ಕೆ ಅವರು ಮಾತುಕತೆ ಮೌನರೂಪದಲ್ಲಿ ಇರಲಿ ಎಂದು ತಿಳಿಸಿದಾಗ, ನಾನು ಅವರನ್ನು ಆಶ್ಚರ್ಯದಿಂದ ನೋಡಿದೆ. 'ನೀನೂ ಮೌನವಾಗಿದ್ದಾಗ ಮಾತ್ರ ನನ್ನೊಡನೆ ಮೌನದಿಂದ ಮಾತನಾಡಲು ಸಾಧ್ಯ' ಎಂದು ಅವರು ತಿಳಿಸಿದರು. ನಂತರ ನಾನು ಹಿಂಜರಿಕೆಯಿಂದ ಅವರೆದುರು ಕಣ್ಣುಮುಚ್ಚಿ ಕುಳಿತಾಗ, ಶಾಂತತೆಯನ್ನು ಅನುಭವಿಸಿದೆ. ಅಲ್ಲಿ ಪದಗಳ ಸಂಭಾಷಣೆ ಇರದಿದ್ದರೂ ಅದು ಅತ್ಯಂತ ತೃಪ್ತಿಕರವಾಗಿತ್ತು.

–ವಿದ್ಯಾ ಅರೋರಾ

ಕೆಲವು ದಿನಗಳ ಹಿಂದೆ ಧ್ಯಾನದಲ್ಲಿ ನನ್ನ ದೇಹವು ಸಂಪೂರ್ಣವಾಗಿ ಚೈತನ್ಯಗಳಿಂದ ಸುತ್ತುವರಿದ ಬೆಳಕಿನ ಕಣವಾಗಿದ್ದ ಅನುಭವವಾಯಿತು. ಆಗ ನಾನು ಪ್ರೀತಿಯ ಸಾಗರದಲ್ಲಿ ತೇಲುತ್ತಿದ್ದೆ. ನನ್ನ ಅರಿವು ಪರಿಪೂರ್ಣವಾಗಿದ್ದು, ಎಲ್ಲರೊಡನೆ ಶಾಂತಿಯಿಂದಿದ್ದೆ. ಆ ಅನುಭವ ಕೆಲವು ಕಾಲ ಹಾಗೇ ಇತ್ತು.

ಒಂದು ದಿನ ಕಾರಿನಲ್ಲಿ ಆಫೀಸಿಗೆ ಪ್ರಯಾಣಿಸುತ್ತ ನನ್ನೊಳಗಿರುವ ಬೆಳಕಿನ ಬಗ್ಗೆ ಆಲೋಚಿಸಿದಾಗ, ನಾನು ದೇವರೊಡನೆ ಸಂಭಾಷಿಸಲು ಪ್ರಾರಂಭಿಸಿದೆ. ನಾನು ಅತ್ಯಂತ ಭಾವುಕನಾಗಿ, ನಿನ್ನನ್ನು ಕಾಣಲು ಅಥವಾ ಅನುಭವಿಸಲು ಆಗುತ್ತಿಲ್ಲ ಏಕೆ ಎಂದು ಕಣ್ಣೀರ್ಗರೆಯಲು ಆರಂಭಿಸಿದೆ. ತಕ್ಷಣವೇ ನನ್ನ ಒಳಧ್ವನಿಯೊಂದು, 'ಯಾರು ನನಗಾಗಿ ಹಂಬಲಿಸುವಂತೆ ಪ್ರೇರೇಪಿಸುತ್ತಿರುವರೋ, ಯಾರು ನನ್ನನ್ನು ನೋಡಲು ಅಥವಾ ಅನುಭವಿಸಲು ಪ್ರೇರೇಪಿಸುತ್ತಿರುವರೋ, ಅದು ನಾನೇ. ಹೀಗಿರುವಾಗ ನೀನು ಯಾರೊಡನೆ ಮತ್ತು ಏಕೆ ಜಗಳವಾಡುವೆ? ಎಲ್ಲವನ್ನೂ ಬಿಟ್ಟು, ಈ ಭಾವನೆಯನ್ನು ಸಂತೋಷದಿಂದ ಅನುಭವಿಸು' ಎಂದಾಗ ನಾನು ಮೌನವಾದೆ.

–ವಿಶ್ವಾಸ್ ದೀಕ್ಷಿತ್

ನಾನು ಪ್ರಯಾಣಿಸುತ್ತಿದ್ದ ಆಟೋ, ಟ್ರಾಫಿಕ್ ಸಿಗ್ನಲ್‌ನಲ್ಲಿ ನಿಂತಾಗ ಸಾಂತಾಕ್ರೂಸ್ ರೈಲ್ವೆ ನಿಲ್ದಾಣದಿಂದ ಬರುತ್ತಿದ್ದ ಜನ ಸಮೂಹವನ್ನು ವೀಕ್ಷಿಸುತ್ತಿದ್ದೆ. ತಕ್ಷಣ ನನ್ನನ್ನು ಒಂದು ಭಾವನಾತ್ಮಕ ಅಲೆಯು ಆವರಿಸಿ ಕಣ್ಣುಗಳು ತೇವವಾದವು. ನಾನು ಅವರೆಲ್ಲರಿಗೂ ಬೆಳಕನ್ನು ಹರಡುತ್ತಾ, ಆ ಬೆಳಕನ್ನೇ ಇಡೀ ಮಾನವಕುಲಕ್ಕೆ ಶಾಂತಿ ಹಾಗೂ ಪ್ರೀತಿಯನ್ನು ಹರಡುವಂತೆ ಪ್ರಾರ್ಥಿಸಿದೆ. ಬೆಳಕೇ ನನ್ನನ್ನು ಹಾಗೆ ಮಾಡಲು ಪ್ರೇರೇಪಿಸಿತೇನೋ ಎಂಬಂತಿತ್ತು. ಈಗಲೂ ನಾನು ಅದೇ ಭಾವದಲ್ಲಿದ್ದೇನೆ.

–ಗೀತಾ ಸರಸ್ವತಿ

ಧ್ಯಾನದಲ್ಲಿ ನಾನು ಒಂದು ಸುರಂಗದಲ್ಲಿ ಪ್ರಯಾಣಿಸುತ್ತಿದ್ದರೂ, ಬೆಳಕಿನಲ್ಲಿದ್ದ ಅರಿವು ನನಗಿತ್ತು. ಸ್ವಲ್ಪ ಸಮಯದ ನಂತರ ದೂರದಲ್ಲಿ ಕಾಣುತ್ತಿದ್ದ ಒಂದು ಬೆಳಕಿನೆಡೆಗೆ ಚಲಿಸಿದೆ. ಆ ಬೆಳಕು ನನ್ನ ಹೃದಯಕ್ಕೆ ಹತ್ತಿರವಾಗಿತ್ತು. ಹಿಂದೆಂದೂ ಕಾಣದ ಆನಂದವನ್ನು ಅನುಭವಿಸುತ್ತಾ ಅಲ್ಲಿ ಎಷ್ಟು ಹೊತ್ತು ಕಳೆದೆನೋ ಗೊತ್ತಿಲ್ಲ! ಆ ಅನುಭವದಿಂದ ಹೊರಬರುವ ಇಚ್ಛೆಯಿಲ್ಲದಿದ್ದರೂ, ಸುತ್ತಲಿನ ನಿಶ್ಶಬ್ದದ ಅರಿವಾಗಿ ಕಣ್ಣುಗಳನ್ನು ತೆರೆದೆ.

– ಜಯಂತಿ ನಟರಾಜನ್

ಪ್ರತಿನಿತ್ಯದ ಅಭ್ಯಾಸದಂತೆ ನಾನು ನನ್ನ ಕೆಲಸದ ಸ್ಥಳದಿಂದ ಹೊರಡುವ ಮೊದಲು ನನ್ನ ಹಾಗೂ ನನ್ನ ಗಾಡಿಯ ರಕ್ಷಣೆಗಾಗಿ ಮಹರ್ಷಿ ವಿಶ್ವಾಮಿತ್ರರನ್ನು ಪ್ರಾರ್ಥಿಸಿದೆ. ಸುರಕ್ಷಿತವಾಗಿ ಹಾಸ್ಟೆಲ್ ಸೇರಿದೆ. ಎರಡು ದಿನಗಳ ನಂತರ ನನ್ನ ಬಳಿ ಗಾಡಿಯ ಬೀಗದ ಕೈ ಇಲ್ಲದಿರುವುದರ ಅರಿವಾಗಿ, ಗಾಡಿಯ ಬಳಿ ಬಂದರೆ ಗಾಡಿ ಹಾಗೂ ಬೀಗದ ಕೈ ಎರಡೂ ಸುರಕ್ಷಿತವಾಗಿದ್ದವು! ಸಪ್ತಋಷಿಗಳು ಹಾಗೂ ಮಾಸ್ಟರ್ 'ವಿ' ಅವರ ಕೃಪಾಶೀರ್ವಾದಕ್ಕೆ ನನ್ನ ಮನ ಮಿಡಿಯಿತು.

–ಎನ್. ಸಿ. ಚಂದನ

ಕೆಲವು ದಿನಗಳ ಹಿಂದೆ, ನನ್ನೊಳಗೆ ನಿಜವಾಗಿಯೂ ಯಾರಿರುವರೆಂದು ತಿಳಿಯಲು ಕನ್ನಡಿಯ ಮುಂದೆ ನಿಂತು ನನ್ನನ್ನೇ ನಾನು ದೃಷ್ಟಿಸಿ ನೋಡುತ್ತಿದ್ದೆ. ತಕ್ಷಣ ನನ್ನ ತಲೆಯ ಸುತ್ತ ಪ್ರಕಾಶಮಾನವಾದ ಬಿಳಿಯ ಬೆಳಕನ್ನು ನೋಡಿದೆ. ನಂತರ ಕೆಲವೇ ಕ್ಷಣದಲ್ಲಿ ನನ್ನ ಇಡೀ ದೇಹವೆಲ್ಲ ಬಿಳಿಯ ಬೆಳಕಾಗಿ ಪರಿವರ್ತಿಸಿತು. ನನ್ನ ಉಸಿರಾಟ ನಿಂತಂತಾಯಿತು. ನನ್ನ ದೇಹ ನಿಧಾನವಾಗಿ ಎಡದಿಂದ ಬಲಕ್ಕೆ ಚಲಿಸಲಾರಂಭಿಸಿತು. ಆದರೆ ಬೆಳಕು ಮಾತ್ರ ಚಲಿಸದೆ ಶುದ್ಧ ಶ್ವೇತವರ್ಣದಿಂದ ಹೊಳೆಯುತ್ತಿತ್ತು. ಅದನ್ನೇ ನೋಡುತ್ತಾ ಸ್ತಂಭೀಭೂತಳಾದರೂ, ನನ್ನ ಸುತ್ತಲಿನ ಆಗುಹೋಗುಗಳ ಅರಿವಿತ್ತು. ಇಂತಹ ಕಲ್ಪನೆಗೂ ನಿಲುಕದ ಆಶ್ಚರ್ಯಕರವಾದ ಅನುಭವದಿಂದಾಗಿ ನನ್ನ ಕಣ್ಣುಗಳಲ್ಲಿ ಕಂಬನಿ ತುಂಬಿತು.

–ವಿದ್ಯಾ ವಿಶ್ವಾಮಿತ್ರ

ತಪೋವಾಣಿ, ಕನ್ನಡ ಮಾಸಪತ್ರಿಕೆ, ವಾರ್ಷಿಕ ಚಂದಾ : ರೂ.200/–
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು : ಶ್ಯಾಮಲಾ ದೇವಿ, ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077. ಮಾನಸ ಫೌಂಡೇಶನ್ (ರಿ.) ಪರವಾಗಿ.
ಮಾಲೀಕರು : ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077
ಪ್ರಕಾಶನ ಸ್ಥಳ ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077
ಮುದ್ರಣ ಸ್ಥಳ : ಆರ್ಟ್ ಪ್ರಿಂಟ್, 719/ಎ, ವೆಸ್ಟ್ ಆಫ್ ಕಾರ್ಡ್ ರೋಡ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು – 560 086. ಫೋನ್ : 2335 9992
ಸಂಪಾದಕರು : ಶ್ಯಾಮಲಾ ದೇವಿ